**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ**

**ಎಸ್.ಸಿ. ನಂಃ 205/2022**

ಫಿರ್ಯಾದುದಾರ **....** ಕರ್ನಾಟಕ ಸರಕಾರ

ವಿರುದ್ಧ

ಆರೋಪಿ **....** ಮೆಹಬೂಬಸಾಬ ಗರೀಬಸಾಬ ಗೊರವನಕೊಳ್ಳ

**- - - - -**

ಆರೋಪಿಯ ಹೆಸರು **:** ಮೆಹಬೂಬಸಾಬ ಗೊರವನಕೊಳ್ಳ
ತಂದೆಯ ಹೆಸರು **:** ಗರೀಬಸಾಬ ಗೊರವನಕೊಳ್ಳ
ವಯಸ್ಸು **: 41** ವರ್ಷ
ಉದ್ಯೋಗ **:** ಕೂಲಿ ಕೆಲಸ
ವಾಸಸ್ಥಳ **:** ಗಾಂಧೀನಗರ**,** ಮುನವಳ್ಳಿ**,**
ತಾಃ ಸವದತ್ತಿ **,** ಜಿಃ ಬೆಳಗಾವಿ**.**

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ. 1 ನೀವು ಅಭಿಯೋಜನೆ ಪರ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿದ್ದೀರಾ**?**

ಉತ್ತರಃ ಹೌದು

ಪ್ರಶ್ನೆ. 2 ಪ್ರಾಸಾಃ1 ಮಹೇಶ ಮುರುಳಿಧರ ಪಾಟೀಲ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ಇಸ್ಮಾಯಿಲ್ ಬೀಡಿ ಇವರಿಗೆ ಒಂದು ಗಂಡು ಮಗ ಮತ್ತು ಇಬ್ಬರೂ ಹೆಣ್ಣು ಮಕ್ಕಳು ಶಭಾನಾ ಮತ್ತು ಆರೀಫಾ. ಶಭಾನಾ ಅವಳನ್ನು ಆರೋಪಿಯಾದ ನಿಮಗೆ 2012-2013 ರಲ್ಲಿ ಮದುವೆ ಮಾಡಿಕೊಡಲಾಗಿತ್ತು. ಚಾಸಾ-1 ನೇಯವರ ಎರಡನೇ ಮಗಳು ಆರಿಫಾಳನ್ನು ಸವದತ್ತಿ ತಾಲ್ಲೂಕಿನ ಯಕ್ಕುಂಡಿಗೆ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ನಂತರ ಶಭಾನಾ ಆರೋಪಿಯಾದ ನಿಮ್ಮ ಜೊತೆ ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದಳು. ನಂತರ ಆಕೆ ಸವದತ್ತಿಯಲ್ಲಿ ವಾಸ

ಮಾಡುತ್ತಿದ್ದಳು ಎಂದು ಚಾಸಾ-1 ರವರಿಂದ ಸಾಕ್ಷಿಯವರಿಗೆ ತಿಳಿಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 3 ಪ್ರಾಸಾಃ1 ರವರು ಮತ್ತೂ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.08.2022 ರಂದು ಬೆಳಿಗ್ಗೆ ಸುಮಾರು 10.30 -11.00 ಗಂಟೆ ಸಮಯದಲ್ಲಿ ಚಾಸಾ-1 ನೇಯವರು ಸಾಕ್ಷಿಯವರ ಮನೆಯ ಬಳಿ ಬಂದು ಅವರ ಮಗಳ ಶಭಾನಾಳ ಶೀಲ ಶಂಕಿಸಿ ಆಕೆಯನ್ನು ಆರೋಪಿಯಾದ ನೀವು ಕೊಲೆ ಮಾಡಿರುತ್ತೀರಿ ಮತ್ತು ಈ ಬಗ್ಗೆ ಸವದತ್ತಿಯಲ್ಲಿರುವ ಶಭಾನಾಳ ಮನೆಗೆ ಬನ್ನಿ ಎಂದು ಚಾಸಾ-1 ರವರು ಹೇಳಿದ್ದು, ಅದರಂತೆ ಸಾಕ್ಷಿಯವರು, ಚಾಸಾ-15, ಚಾಸಾ-14, ಚಾಸಾ-12, ಚಾಸಾ-13 ಮತ್ತು ಚಾಸಾ-11, ಮತ್ತು ಆತನ ತಾಯಿ ಚಾಸಾ-10 ಹಸೀನಾ ಮತ್ತು ಚಾಸಾ-16 ಮುಮ್ತಾಜ ಎಲ್ಲರೂ ಸವದತ್ತಿಗೆ ಹೋಗಿ ಅಯ್ಯಪ್ಪಾಸ್ವಾಮಿ ನಗರದಲ್ಲಿ ಶಭಾನಾ ವಾಸ ಮಾಡುತ್ತಿದ್ದ ಮನೆಗೆ ಹೋದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 4 ಪ್ರಾಸಾಃ1 ರವರು ಮತ್ತೂ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಮನೆಗೆ ಹೋಗಿ ನೋಡಿದಾಗ ಮನೆಯ ಬಾಗಿಲಲ್ಲಿ ರಕ್ತ ಬಿದ್ದಿತ್ತು. ಒಳಗಡೆ ಹೋಗಿ ನೋಡಿದಾಗ ರೂಮಿನೊಳಗೆ ಶಭಾನಾಳ ಶವ ಬಿದ್ದಿತ್ತು. ಆಕೆಯ ಪಕ್ಕದಲ್ಲಿ ಆಕೆಯ ಮಗಳು ಚಾಸಾ-4 ಆಲಿಯಾ ಕುಳಿತಿದ್ದಳು. ಶಭಾನಾಳ ಮೈಮೇಲೆಲ್ಲಾ ರಕ್ತ ಇತ್ತು ಮತ್ತು ಕೆಳಗೆ ರಕ್ತ ಬಿದ್ದಿತ್ತು. ಶಭಾನಾಳ ಶವದ ಎದೆ, ಹೊಟ್ಟೆ ಮತ್ತು ಮೈಮೇಲೆಲ್ಲಾ ಚುಚ್ಚಿದ ಗಾಯಗಳಾಗಿದ್ದವು. ಕುತ್ತಿಗೆಯ ಮೇಲೆ ಅರ್ಧ ಕೊಯ್ದು ಗಾಯವಾಗಿತ್ತು. ಆ ಬಗ್ಗೆ ಚಾಸಾ-4 ನೇಯವಳನ್ನು ಚಾಸಾ-1 ನೇಯವರು ವಿಚಾರಿಸಿದಾಗ ತನ್ನ ತಂದೆ ಒಂದು ಚಾಕು ತಂದು ತಾಯಿಗೆ ಚುಚ್ಚಿರುತ್ತಾನೆ ಮತ್ತು ತಾನು

ಒದರಾಡಿದರೂ ತನ್ನ ತಂದೆ ತನ್ನ ತಾಯಿಯನ್ನು ಬಿಟ್ಟಿಲ್ಲ ಎಂದು ಹೇಳಿರುತ್ತಾಳೆ. ನಂತರ ಅವರು ಪಕ್ಕದ ಮನೆಯಲ್ಲಿ ವಾಸವಿದ್ದ ಚೋಪಡೆ ಚಾಸಾ-5 ರವರನ್ನು ವಿಚಾರಿಸಿದಾಗ, ಅವರು ಆ ದಿನ ಬೆಳಿಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ರೊಟ್ಟಿ ತಿನ್ನುತ್ತಿದ್ದಾಗ ಶಭಾನಾಳ ಮನೆಯಿಂದ ಗಲಾಟೆಯ ಶಬ್ದ ಕೇಳಿ ಅವರು ಓಡಿ ಹೋಗಿ ಮನೆಯಲ್ಲಿ ನೋಡಿದಾಗ ಶಭಾನಾ ಕೆಳಗೆ ಬಿದ್ದಿದ್ದಳು ಮತ್ತು ಆರೋಪಿಯಾದ ನೀವು ಅವರನ್ನು ನೋಡಿ ಏನೂ ಮಾತನಾಡದೇ ಮುಂದಿನ ಬಾಗಿಲು ತೆಗೆದು ಓಡಿ ಹೋಗಿರುತ್ತೀರಿ ಮತ್ತು ಆ ಸಮಯದಲ್ಲಿ ಆರೋಪಿಯಾದ ನಿಮ್ಮ ಕೈಯಲ್ಲಿ ಒಂದು ದೊಡ್ಡ ಚಾಕು ಇತ್ತು ಎಂದು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 5 ಪ್ರಾಸಾಃ1 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-1 ನೇಯವನು ಅಲ್ಲಿಂದ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾರೆ. ನಂತರ ಪೋಲಿಸರು ಸ್ಥಳಕ್ಕೆ ಬಂದು ಅವರನ್ನು ವಿಚಾರಿಸಿ ಪಂಚನಾಮೆಗೆ ಸಾಕ್ಷಿಯಾಗುವಂತೆ ಕೇಳಿ ಸಾಕ್ಷಿಯವರಿಗೆ ಮತ್ತು ಚಾಸಾ-3 ಇಮಾಮಸಾಬ್ ಸನದಿ ಹಾಗೂ ಚಾಸಾ-16 ಮುಮ್ತಾಜ ಅವರಿಗೆ ನಿಪಿ-1 ರಂತೆ ನೋಟಿಸ್ಸ ಕೊಟ್ಟಿರುತ್ತಾರೆ. ನಂತರ ಸ್ಥಳದಲ್ಲಿ ಅವರ ಸಮಕ್ಷಮ ಪೋಲಿಸರು 03.15 ರಿಂದ ಸುಮಾರು ಮುಕ್ಕಾಲು ಗಂಟೆ ಸಮಯ ನಿಪಿ-2 ರಂತೆ ಶವ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯ ಸಂದರ್ಭದಲ್ಲಿ ಪೋಲಿಸರು ಸ್ಥಳದಲ್ಲಿ ನಿಪಿ-3 ರಿಂದ ನಿಪಿ-6 ರಂತೆ ಪೋಟೊಗಳನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 6 ಪ್ರಾಸಾಃ1 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಶಭಾನಾಳ ಶವವನ್ನು ಪೋಲಿಸರು ಸವದತ್ತಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು

ಹೋಗಿರುತ್ತಾರೆ. ನಂತರ ಚಾಸಾ-1 ನೇಯವರು ಪೋಲಿಸರಿಗೆ ಶಭಾನಾ ಕೊಲೆಯಾದ ಜಾಗೆಯನ್ನು ತೋರಿಸಿರುತ್ತಾರೆ. ಆ ಸಂದರ್ಭದಲ್ಲಿ ಪೋಲಿಸರು ಸದರಿ ಸ್ಥಳದಲ್ಲಿ ಸುಮಾರು ಮುಕ್ಕಾಲು ಗಂಟೆ ಸಮಯ ನಿಪಿ-7 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಪೋಲಿಸರು ಸಾಕ್ಷಿಯವರ ಸಹಿ ನಿಪಿ-7(ಎ)ರಂತೆ ಪಡೆದುಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ರಕ್ತ ಬಿದ್ದಿದ್ದು, ಸದರಿ ರಕ್ತದ ಮಾದರಿಯನ್ನು ಪೋಲಿಸರು ಹತ್ತಿಯಲ್ಲಿ ಸಂಗ್ರಹಿಸಿರುತ್ತಾರೆ. ಸ್ಥಳದಲ್ಲಿ ಶಭಾನಾಳ ಬಳೆ ಚೂರು ಮತ್ತು ಒಂದು ಬಿಳಿ ಬಣ್ಣದ ದುಪ್ಪಟ್ಟಾ ಹಾಗೂ ಗೋಡೆಯ ಮೇಲೆ ಬಿದ್ದಿದ್ದ ರಕ್ತದ ಮಾದರಿಯನ್ನು ಸಹ ಪೋಲಿಸರು ಸಂಗ್ರಹಿಸಿಕೊಂಡಿರುತ್ತಾರೆ. ಸ್ಥಳದಲ್ಲಿದ್ದ ಒಂದು ಮೊಬೈಲ್ ಮತ್ತು ರಕ್ತದ ಕಲೆಗಳಾಗಿದ್ದ ಡೋರಮ್ಯಾಟನ್ನು ಸಹ ಪೋಲಿಸರು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಸ್ಥಳದಲ್ಲಿ ನಿಪಿ-8 ರಿಂದ ನಿಪಿ-14 ರಂತೆ ಪೋಟೊಗಳನ್ನು ತೆಗೆಸಿರುತ್ತಾರೆ. ಪೋಲಿಸರು ಸ್ಥಳದಲ್ಲಿ ಅಮಾನತು ಪಡಿಸಿರುವ ವಸ್ತುಗಳನ್ನು ಮುಮಾ-1 ರಿಂದ ಮುಮಾ-6 ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 7 ಪ್ರಾಸಾಃ1 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದೇ ಪೋಲಿಸರು ಸಾಕ್ಷಿಯವರನ್ನು ಮತ್ತು ಚಾಸಾ-3 ನೇಯವರನ್ನು ಪೋಲಿಸರು ರಾತ್ರಿ 08.00 ಗಂಟೆಗೆ ಪೋಲಿಸ ಠಾಣೆಗೆ ಕರೆಸಿರುತ್ತಾರೆ. ಆಗ ಅಲ್ಲಿ ಆರೋಪಿಯಾದ ನೀವು ಶಭಾನಾಳಿಗೆ ಚುಚ್ಚಲು ಉಪಯೋಗಿಸಿದ ಚಾಕು ಎಂದು ಹೇಳಿ ಒಂದು ಚಾಕುವನ್ನು ಪೋಲಿಸರ ಮುಂದೆ ಹಾಜರು ಪಡಿಸಿರುತ್ತೀರಿ. ಸದರಿ ಚಾಕುವನ್ನು ಪ್ಯಾಕ್ ಮಾಡಿ ಸೀಲ್ ಮಾಡಿ ಪೋಲಿಸರು ವಶಪಡಿಸಿಕೊಂಡು, ಆ ಸಮಯದಲ್ಲಿ ಪೋಲಿಸರು ರಾತ್ರಿ 08.00 ರಿಂದ 08.30 ಗಂಟೆ ಸಮಯದಲ್ಲಿ ನಿಪಿ-15 ರಂತೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಸಾಕ್ಷಿಯವರು ನಿಪಿ-15(ಎ) ರಂತೆ ನನ್ನ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ನಿಪಿ-16 ಮತ್ತು

ನಿಪಿ-17 ರಂತೆ ಪೋಟೊಗಳನ್ನು ತೆಗೆಸಿರುತ್ತಾರೆ. ನಿಪಿ-17 ರಲ್ಲಿರುವ ಚಾಕುವನ್ನು ಮುಮಾ-7 ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 8 ಪ್ರಾಸಾಃ1 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನೀವು ಕೃತ್ಯ ನಡೆದ ಸಮಯದಲ್ಲಿ ಧರಿಸಿದ ಬಟ್ಟೆಗಳಾದ ರಕ್ತದ ಕಲೆಗಳಾಗಿದ್ದ ಗುಲಾಬಿ ಬಣ್ಣದ ತುಂಬು ತೋಳಿನ ಶರ್ಟ, ಒಂದು ರಕ್ತದ ಕಲೆಗಳಾಗಿದ್ದ ಜಿನ್ಸ ಪ್ಯಾಂಟ್ ಮತ್ತು ಒಂದು ಮೊಬೈಲ್‌ನ್ನು ಹಾಜರು ಪಡಿಸಿದ್ದು, ಪೋಲಿಸರು ಅವುಗಳನ್ನು ಅನುಕ್ರಮವಾಗಿ ಮುಮಾ-8 ರಿಂದ ಮುಮಾ-10 ಎಂದು ಗುರುತಿಸಿ, ಆ ಸಮಯದಲ್ಲಿ ಪೋಲಿಸರು ರಾತ್ರಿ 09.30 ಗಂಟೆಯವರೆಗೆ ನಿಪಿ-18 ರಂತೆ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯ ಸಮಯದಲ್ಲಿ ಪೋಲಿಸರು ನಿಪಿ-19 ರಿಂದ ನಿಪಿ-23 ರಂತೆ ಪೋಟೊಗಳನ್ನು ತೆಗೆದಿರುತ್ತಾರೆ. ನಿಪಿ-22 ಮತ್ತು ನಿಪಿ-23 ಪೋಟೊಗಳಲ್ಲಿರುವ ಮೊಬೈಲ್ ಆರೋಪಿಯಾದ ನಿಮ್ಮಿಂದ ವಶಪಡಿಸಿಕೊಂಡ ಮೊಬೈಲ್‌ಪೋನ್ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 9 ಪ್ರಾಸಾಃ1 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಮರುದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಪೋಲಿಸರು ಸಾಕ್ಷಿಯವರನ್ನು ಮತ್ತು ಚಾಸಾ-3 ರವರನ್ನು ಪುನಃ ಠಾಣೆಗೆ ಕರೆಯಿಸಿ, ಆ ಸಮಯದಲ್ಲಿ ಮೃತ ಶಭಾನಾಳ ಮೈಮೇಲಿದ್ದ ಬಟ್ಟೆಗಳನ್ನು ಪೋಲಿಸರು ನಿಪಿ-24 ರಂತೆ ಜಪ್ತಿ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ಸದರಿ ಬಟ್ಟೆಗಳಲ್ಲಿ ಒಂದು ಬಿಳಿ ಬಣ್ಣದ ಓಡ್ನಿ, ಗುಲಾಬಿ ಬಣ್ಣದ ಬ್ರಾ, ನೀಲಿ ಬಣ್ಣದ ನಿಕ್ಕರ, ನೀಲಿ ಬಣ್ಣದ ಹೂವಿನ ಡಿಜೈನ್ ಇರುವ ಒಂದು ನೈಟಿ ಮತ್ತು ಒಂದು ನೀಲಿ ಬಣ್ಣದ ಲಂಗಾ ಇತ್ತು. ಅವುಗಳನ್ನು ಮುಮಾ-

11 ರಿಂದ ಮುಮಾ-15 ಎಂದು ಗುರುತಿಸಲಾಯಿತು. ಈ ಕೇಸಿಗೆ ಸಂಬಂಧಪಟ್ಟಂತೆ ಪೋಲಿಸರು ಸಾಕ್ಷಿಯವರನ್ನು ವಿಚಾರಣೆ ಮಾಡಿದ್ದು, ಅವರು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತಾರೆ. ಆರೋಪಿಯಾದ ನಿಮ್ಮನ್ನು ನೋಡಿದರೇ ಗುರುತಿಸುತ್ತಾರೆ ಮತ್ತು ಆ ದಿನ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರು ಪಡಿಸಿರುವ ಆರೋಪಿಯಾದ ನಿಮ್ಮನ್ನು ನೋಡಿ ಗುರಿತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.10 ಪ್ರಾಸಾಃ2 ಆಲಿಯಾ ಮೆಹಬೂಬಸಾಬ್‌ರವರು ತಮ್ಮ ಸಾಕ್ಷ್ಯದಲ್ಲಿ, ತನ್ನ ತಂದೆಗೆ ತಾನೂ ಸೇರಿ ಇಬ್ಬರೂ ಮಕ್ಕಳು. ಆಳನ ಅಣ್ಣನ ಹೆಸರು ಸೂಫಿಯಾನ. ತನ್ನ ತಾಯಿ ತೀರಿಕೊಳ್ಳುವಾಗ ತಾವು ಸವದತ್ತಿ ಮನೆಯಲ್ಲಿದ್ದರು. ಆಗ ತಾನು ಮತ್ತು ತನ್ನ ತಾಯಿ ಮಾತ್ರ ಇದ್ದರು. ಆ ಸಮಯದಲ್ಲಿ ತನ್ನ ಅಣ್ಣ ಸೂಫಿಯಾನ ತನ್ನ ತಂದೆ ಮತ್ತು ಅಜ್ಜಿಯ ಜೊತೆಯಲ್ಲಿ ಮುನವಳ್ಳಿಯಲ್ಲಿದ್ದ. ತನ್ನ ತಾಯಿ ತೀರಿಕೊಳ್ಳುವ ಸಂದರ್ಭದಲ್ಲಿ ಸಾಕ್ಷಿದಾರಳು ಒಂದನೇ ತರಗತಿಯಲ್ಲಿ ಓದುತ್ತಿದ್ದ ಮತ್ತು ತನ್ನ ತಾಯಿ ತೀರಿಕೊಂಡ ದಿನ ತಾನು ಶಾಲೆಗೆ ಹೋಗಿರಲಿಲ್ಲ. ಆ ದಿನ ಹಬ್ಬ ಇತ್ತು. ಈಗ ಎರಡುವರೆ ವರ್ಷಗಳ ಹಿಂದೆ ಬೆಳಿಗ್ಗೆ 10.30 ಗಂಟೆಗೆ ತನ್ನ ತಾಯಿ ತೀರಿಕೊಂಡಿರುತ್ತಾಳೆ. ಆ ದಿನ ತಂದೆ ಅವರ ಮನೆಗೆ ಬಂದಾಗ ಸಾಕ್ಷಿದಾರಳು ಮತ್ತು ಆತಳ ತಾಯಿ ಮನೆಯಲ್ಲಿದ್ದರು ಆಗ ತನ್ನ ತಾಯಿಯಲ್ಲಿ ಅಪ್ಪ ಬಂದಿರುತ್ತಾರೆ ಎಂದು ಹೇಳಿರುತ್ತಾನೆ. ಆಗ ತನ್ನ ತಾಯಿ ಅಪ್ಪನಲ್ಲಿ ಯ್ಯಾಕೆ ಬಂದಿದ್ದಿ ಎಂದು ಕೇಳಿರುತ್ತಾಳೆ. ಆಗ ಅಪ್ಪ ತನ್ನ ತಾಯಿಯಲ್ಲಿ, ತಾನು ತನ್ನ ಹುಡುಗಿಯನ್ನು ನೋಡಲು ಬಂದಿರುತ್ತೇನೆ ಎಂದು ಹೇಳಿರುತ್ತಾನೆ. ಆಗ ಸಾಕ್ಷಿದಾರಳ ತಾಯಿ ಅಪ್ಪನಲ್ಲಿ ಹುಡುಗಿಯನ್ನು ನೋಡಲು ಬಂದಿರುವುದಾದರೇ ಹೊರಗೆ ನೋಡು ಎಂದು ಹೇಳಿರುತ್ತಾಳೆ. ಆಗ ತನ್ನ ಅಪ್ಪ ತಾಯಿಯ ಕೂದಲು ಹಿಡಿದುಕೊಂಡು ಚಾಕುವಿನಿಂದ ಮೊದಲು ಬೆನ್ನಿಗೆ ಹೊಡೆದಿರುತ್ತಾನೆ. ನಂತರ ಚಾಕುವಿನಿಂದ ಹೊಟ್ಟೆಗೆ ಹೊಡೆದಿರುತ್ತಾನೆ. ನಂತರ ತನ್ನ ಅಮ್ಮನ ಹಣೆಯ ಮೇಲೆ ಕಾಲಿಟ್ಟು

ಕುತ್ತಿಗೆಯನ್ನು ಕೊಯ್ದಿರುತ್ತಾನೆ. ಆಗ ಆತಳು ಚೀರಾಡುತ್ತಿದ್ದ. ಆಗ ತನ್ನ ತಾಯಿ ಸತ್ತಿರುತ್ತಾಳೆ. ಆಗ ತಾಯಿಯ ಮೈಮೇಲೆ ರಕ್ತ ಬಂದಿರುತ್ತದೆ. ನಂತರ ಬಾಜುದಾರರು ಮನೆಗೆ ಬಂದಿರುತ್ತಾರೆ. ಆ ರೀತಿ ಬಂದವರು ತನ್ನ ತಾಯಿಯನ್ನು ನೋಡಿ ಹೆದರಿ ಅವರ ಹೆಂಡತಿಯನ್ನು ಕರೆದುಕೊಂಡು ಬರಲು ಹೋದರು. ನಂತರ ತನ್ನ ಅಪ್ಪ ಚಾಕು ತೆಗೆದುಕೊಂಡು ಓಡಿ ಹೋದರು. ಆಗ ಬಾಜುದಾರರು ಎಲ್ಲಾ ಮನೆಗೆ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 11 ಪ್ರಾಸಾಃ2 ರವರು ಮತ್ತೂ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಬಾಜುದಾರರು ತನ್ನ ಅಜ್ಜಿ ಅಂದರೆ ತನ್ನ ತಾಯಿಯ ತಾಯಿಗೆ ಫೋನ್ ಮಾಡಿ ವಿಷಯ ಹೇಳಿರುತ್ತಾರೆ. ನಂತರ ಮಧ್ಯಾಹ್ನ 01.30 ಗಂಟೆಗೆ ತನ್ನ ಅಜ್ಜಿ, ಅಜ್ಜ, ಮಾಮಾ, ಮಾಮಿ ಮತ್ತು ಬೇರೆ ಹತ್ತು ಮಂದಿ ಬಂದಿದ್ದರು. ನಂತರ ತನ್ನ ಅಜ್ಜ ಇಸ್ಮಾಯಿಲ್ ಪೋಲಿಸರನ್ನು ಕರೆಯಲು ಹೋದರು. ನಂತರ ಮೂರುವರೆ ಗಂಟೆಗೆ ಪೋಲಿಸರು ಬಂದು ತನ್ನನ್ನು ಕೇಳಿರುತ್ತಾರೆ. ನಂತರ ಐದಾರು ದಿವಸಗಳ ಮೇಲೆ ತನ್ನನ್ನು ಅಜ್ಜ ಇಸ್ಮಾಯಿಲ್ ಮತ್ತು ಅಜ್ಜಿ ಹಸೀನಾ ತನ್ನನ್ನು ಕೋರ್ಟಗೆ ಕರೆದುಕೊಂಡು ಹೋಗಿರುತ್ತಾರೆ. ಕೋರ್ಟನಲ್ಲಿ ತಾನು ಜಡ್ಜ ಮುಂದೆ ಈಗ ಹೇಳಿರುವ ವಿಷಯಗಳನ್ನು ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ. 12 ಪ್ರಾಸಾಃ3 ಶಿವಾನಂದ ರಾಮಕೃಷ್ಣ ಚೋಪಡೆ ರವರು ತಮ್ಮ ಸಾಕ್ಷ್ಯದಲ್ಲಿ, ಅವರಿಗೆ ಮೃತ ಶಬಾನಾ ಗೊತ್ತು, ಆಕೆಯ ಮನೆ ಅವರ ಮನೆಯ ಪಕ್ಕದಲ್ಲಿತ್ತು. ಸದರಿ ಮನೆ ಶಿವಾನಂದ ವಾಲಿಕಾರ ಇವರಿಗೆ ಸೇರಿದ್ದಾಗಿದ್ದು, ಸದರಿ ಮನೆಯಲ್ಲಿ ಶಬಾನಾ ವಾಸ ಮಾಡುತ್ತಿದ್ದಳು. ಆಕೆ ತೀರಿಕೊಳ್ಳುವ ಸುಮಾರು 15 ದಿನಗಳ ಹಿಂದಿನಿಂದ ಸದರಿ

ಮನೆಯಲ್ಲಿ ಆಕೆ ವಾಸ ಮಾಡುತ್ತಿದ್ದಳು. ಶಬಾನಾಳ ಜೊತೆಯಲ್ಲಿ ಆಕೆಯ 6-7 ವರ್ಷದ ಮಗಳು ವಾಸ ಮಾಡುತ್ತಿದ್ದಳು. ದಿನಾಂಕ 18.08.2022 ರಂದು ಮುಂಜಾನೆ 10.30 ಗಂಟೆ ಸುಮಾರಿಗೆ ಸಾಕ್ಷಿಯವರು ಅವರ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಶಬಾಳಾನ ಮಗಳು ಚೀರಾಡಿದ ಶಬ್ದ ಕೇಳಿಸಿತು. ಆಗ ಅವರು ಊಟ ಮಾಡುವುದನ್ನು ಬಿಟ್ಟು ಶಬಾನಾಳ ಮನೆಗೆ ಓಡಿ ಹೋಗಿ ನೋಡಿದಾಗ ಮನೆಯ ಬಾಗಿಲು ತೆರೆದಿತ್ತು. ಆಗ ಮನೆಯೊಳಗೆ ಶಬಾನಾ ಕೆಳಗೆ ಬಿದ್ದಿದ್ದಳು. ಆಗ ಆರೋಪಿಯಾದ ನೀವು ಅಲ್ಲಿ ಇದ್ದು, ನಿಮ್ಮ ಕೈಯಲ್ಲಿ ಒಂದು ಚಾಕು ಇದ್ದು, ಶಬಾನಾಳ ತಲೆಯ ಮೇಲೆ ಕಾಲಿಟ್ಟು, ಆಕೆಯ ಕುತ್ತಿಗೆಯನ್ನು ಕೊಯ್ಯುತ್ತಿದ್ದೀರಿ. ಆಗ ರಕ್ತ ಹೊರಗೆ ಬರುತ್ತಿತ್ತು. ಆಗ ಸಾಕ್ಷಿಯವರು ಅವರ ಹೆಂಡತಿಯನ್ನು ಕರೆದರು. ಆಗ ಅವರ ಹೆಂಡತಿ ಬಂದು ಅಲ್ಲಿಯ ಸ್ಥಿತಿಯನ್ನು ನೋಡಿ ಹೆದರಿದಳು. ಆಗ ಪಕ್ಕದ ಮನೆಯ ಚಾಸಾ-7, ಚಾಸಾ-8 ಮಹಾದೇವಿ ಮತ್ತು ಚಾಸಾ-9 ಮಲ್ಲಮ್ಮ ಅಲ್ಲಿಗೆ ಬಂದಿರುತ್ತಾರೆ. ಆಗ ಆರೋಪಿಯಾದ ನೀವು ಚಾಕು ಹಿಡಿದುಕೊಂಡು ಅಲ್ಲಿಂದ ಓಡಿ ಹೋಗಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.13 ಪ್ರಾಸಾಃ3 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಮಧ್ಯಾಹ್ನ 12.30 ಗಂಟೆಗೆ ಶಬಾನಾಳ ತಂದೆ ತಾಯಿ ಅಲ್ಲಿಗೆ ಬಂದಿರುತ್ತಾರೆ ಮತ್ತು ಸಾಕ್ಷಿಯವರು ಅವರಲ್ಲಿ ಘಟನೆಯ ಬಗ್ಗೆ ತಿಳಿಸಿ, ನಂತರ ಮರುದಿನ ಸಾಕ್ಷಿಯವರು ಪೋಲಿಸ ಠಾಣೆಗೆ ಹೋಗಿ ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತಾರೆ. ನಂತರ ದಿನಾಂಕ 23.08.2022 ರಂದು ಪೋಲಿಸರು ಅವರನ್ನು ಸವದತ್ತಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯವರು ನ್ಯಾಯಾಧೀಶರ ಮುಂದೆ ಸದರಿ ಘಟನೆಯ ಬಗ್ಗೆ ಹೇಳಿಕೆ ನಿಪಿ-25 ರಂತೆ ನೀಡಿರುತ್ತಾರೆ. ಆರೋಪಿಯಾದ ನೀವು ಶಬಾನಾಳ ಮೇಲೆ ಈ ಮೇಲೆ ಹೇಳಿದಂತೆ ಯಾವ ಕಾರಣಕ್ಕೆ ಹಲ್ಲೆ ಮಾಡಿ ಕತ್ತು ಕೊಯ್ದಿರುತ್ತೀರಿ ಎಂದು ಸಾಕ್ಷಿಯವರಿಗೆ ಗೊತ್ತಿಲ್ಲ ಮತ್ತು ಸದರಿ

ಘಟನೆಯಲ್ಲಿ ಶಬಾನಾ ಸ್ಥಳದಲ್ಲಿ ತೀರಿಕೊಂಡಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.14 ಪ್ರಾಸಾಃ4 ಸುಬಾನಿ ಇಸ್ಮಾಯಿಲ ಬೀಡಿ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ಇಸ್ಮಾಯಿಲ್ ಬೀಡಿ ಅವರ ತಂದೆ. ಚಾಸಾ-10 ಶ್ರೀಮತಿ ಹಸೀನಾ ಬೀಡಿ ಅವರ ತಾಯಿ. ಶಬಾನಾ ಮತ್ತು ಅರಿಫಾ ಅವರ ತಂಗಿಯಂದಿರು. ತಂಗಿ ಅರಿಫಾ ಇವಳನ್ನು ಯಕ್ಕುಂಡಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟದ್ದು, ಶಬಾನಾಳನ್ನು ಮುನವಳ್ಳಿ ಗ್ರಾಮದ ಮೆಹಬೂಬಸಾಬ್ ಗೊರವನಕೊಳ್ಳ ನಿಮಗೆ 2012 ರ ಪೆಬ್ರುವರಿ ತಿಂಗಳಿನಲ್ಲಿ ಮದುವೆ ಮಾಡಿ ಕೊಟ್ಟಿರುತ್ತಾರೆ. ನಿಮಗೆ ಸುಪಿಯಾನ ಮತ್ತು ಆಲಿಯಾ ಇಬ್ಬರು ಮಕ್ಕಳು. ಆಲಿಯಾ ಈ ಕೇಸಿನ ಸಾಕ್ಷಿದಾರಳಾದ ಪ್ರಾಸಾ-2 ಇರುತ್ತಾಳೆ. ಸದರಿ ಮೆಹಬೂಬಸಾಬ್ ಆದ ನೀವು ಈ ಕೇಸಿನ ಆರೋಪಿಯಾಗಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.15 ಪ್ರಾಸಾಃ4 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಶಬಾನಾ ಮದುವೆಯಾದ ನಂತರ ಆರೋಪಿಯಾದ ನಿಮ್ಮ ಜೊತೆ ಮುನವಳ್ಳಿಯಲ್ಲಿರುವ ನಿಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದಳು. ಈಗ ಮೂರು ವರ್ಷಗಳ ಹಿಂದೆ ಶಬಾನಾ ಸವದತ್ತಿಗೆ ಬಂದು ಅಲ್ಲಿ ಆರೋಪಿಯಾದ ನೀವು ಮತ್ತು ಆಕೆ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೀರಿ. ಆರೋಪಿಯಾದ ನೀವು ಶಬಾನಾಳ ಮೇಲೆ ಸಂಶಯ ಪಟ್ಟು ಆಕೆಗೆ ಹಿಂಸೆ ನೀಡುತ್ತಿದ್ದೀರಿ. ಸದರಿ ವಿಷಯವನ್ನು ಶಬಾನಾ ಸಾಕ್ಷಿಯವರ ಊರಿಗೆ ಬಂದಾಗ ಅವರಲ್ಲಿ ಹೇಳಿದ್ದಳು. ಆ ಬಗ್ಗೆ ಅವರ ಊರಿನ ಪ್ರಾಸಾ-1 ಮಹೇಶ ಪಾಟೀಲ, ಚಾಸಾ-15 ದಾದಾಪೀರ ಹುದಲಿ, ಚಾಸಾ-13 ಮುಕ್ತುಮಹುಸೇನ ಸಾವುಕಾರ, ಚಾಸಾ-12 ಮಹಮ್ಮದಶಮಿ ಇಟಗಿ, ಚಾಸಾ-16 ಮಮತಾಜ ಕಿತ್ತೂರ ಹಾಗೂ ಅವರ ತಂದೆ-ತಾಯಿ ಮತ್ತು ಸಾಕ್ಷಿಯವರು

ಮುನವಳ್ಳಿಗೆ ಹೋಗಿ ಆರೋಪಿಯಾದ ನಿಮಗೆ ಬುದ್ದಿವಾದ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.16 ಪ್ರಾಸಾಃ4 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕ 18.08.2022 ರಂದು ಬೆಳಿಗ್ಗೆ 10.45 ಗಂಟೆ ಸಮಯದಲ್ಲಿ ಅವರು ಮನೆಯಲ್ಲಿದ್ದಾಗ ಹುಸೇನಸಾಬ ಮಂಟೂರ (ಚಾಸಾ-20) ಇವರು ಪೋನ್ ಮಾಡಿ ಸಾಕ್ಷಿಯವರ ತಂಗಿ ಶಬಾನಾಳನ್ನು ಆರೋಪಿಯಾದ ನೀವು ಕೊಲೆ ಮಾಡಿರುತ್ತೀರಿ ಎಂದು ತಿಳಿಸಿರುತ್ತಾನೆ. ಸದರಿ ವಿಷಯ ತಿಳಿದ ನಂತರ ಸಾಕ್ಷಿಯವರು, ಅವರ ತಂದೆ -ತಾಯಿ ಮತ್ತು ಈ ಮೇಲೆ ಹೇಳಿದ ಹಿರಿಯರೇಲ್ಲಾ ಸೇರಿಕೊಂಡು ಸವದತ್ತಿಯ ಅಯ್ಯಪ್ಪಾ ಸ್ವಾಮಿ ನಗರದಲ್ಲಿರುವ ಶಬಾನಾ ವಾಸ ಮಾಡುತ್ತಿದ್ದ ಮನೆಗೆ ಹೋಗಿ ನೋಡಿದಾಗ ಮನೆಯ ಅರ್ಧ ಬಾಗಿಲು ತೆರೆದಿತ್ತು. ಮನೆಯೊಳಗೆ ನೆಲದ ಮೇಲೆ ಶಬಾನಾದ ಶವ ಬಿದ್ದಿತ್ತು. ನೆಲದ ಮೇಲೆ ರಕ್ತ ಇತ್ತು ಮತ್ತು ಬಾಗಿಲಿಗೆ ಸಹ ರಕ್ತ ಸಿಡಿದಿತ್ತು. ಆ ಸಮಯದಲ್ಲಿ ಮನೆಯಲ್ಲಿ ಪ್ರಾಸಾ-2 ಆಲಿಯಾ ಇದ್ದಳು. ಶಬಾನಾಳ ಶವ ನೋಡಿದಾಗ ಆಕೆಯ ಕುತ್ತಿಗೆ ಕೊಯ್ದಿತ್ತು. ಹೊಟ್ಟೆ, ಬೆನ್ನು, ಕೈ ಮತ್ತು ಕಾಲಿಗೆ ಚಾಕುವಿನಿಂದ ಚುಚ್ಚಿದ ಗಾಯಗಳು ಇದ್ದವು. ಆ ಸಮಯದಲ್ಲಿ ಸಾಕ್ಷಿಯವರು ಪ್ರಾಸಾ-2 ಳನ್ನು ಕೇಳಿದಾಗ ಆಕೆ ಅವರಲ್ಲಿ ಅಪ್ಪ ಬಂದು ತನ್ನ ತಾಯಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ತಿಳಿಸಿರುತ್ತಾಳೆ. ಆ ನಂತರ ಪಕ್ಕದ ಮನೆಯ ಪ್ರಾಸಾ-3 ಚೋಪಡೆ ಮತ್ತು ಚಾಸಾ-6 ಮಂಜುಳಾ ಚೋಪಡೆ ಬಂದಿದ್ದಾಗಿ ಸಹ ಪ್ರಾಸಾ-2 ನೇಯವಳು ಸಾಕ್ಷಿಯವರಲ್ಲಿ ಹೇಳಿರುತ್ತಾಳೆ. ಶಬಾನಾಳ ಕೊಲೆ ಬೆಳಿಗ್ಗೆ 10.45 ಗಂಟೆ ಸುಮಾರಿಗೆ ಆಗಿರುವುದಾಗಿ ತಿಳಿಯಿತು. ಈ ಕೇಸಿಗೆ ಸಂಬಂಧಪಟ್ಟಂತೆ ಪೋಲಿಸರು ಅವರನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿಯಾದ ನಿಮ್ಮನ್ನು ನೋಡಿದರೇ ಗುರುತಿಸಬಲ್ಲೆ. ಘಟನೆಯ ಬಗ್ಗೆ

ಪೋಲಿಸರಿಗೆ ಫಿರ್ಯಾದಿಯನ್ನು ಅವರ ತಂದೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.17 ಪ್ರಾಸಾಃ5 ಮುಕ್ತುಮ ಹುಸೇನ ಮದರಸಾಬ್ ಸಾವಕಾರ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-10 ರವರ ಮಗಳು ಶಬಾನಾಳನ್ನು 2012 ರಲ್ಲಿ ಮುನವಳ್ಳಿಯ ಆರೋಪಿ-ಮೆಹಬೂಬಸಾಬ್ ಗೋರನಕೊಳ್ಳ ಆದ ನಿಮಗೆ ಮದುವೆ ಮಾಡಿ ಕೊಡಲಾಗಿದ್ದು, ನಿಮಗೆ ಎರಡು ಜನ ಮಕ್ಕಳು, ಸುಫಿಯಾ ಮತ್ತು ಆಲಿಯಾ (ಪ್ರಾಸಾ-2). ಮದುವೆಯಾದ ನಂತರ ಆರೋಪಿಯಾದ ನೀವು ಶಬಾನಾಳಿಗೆ ಅನೈತಿಕ ಸಂಬಂಧ ಇದೆ ಎಂದು ಆಕೆಯ ಮೇಲೆ ಸಂಶಯ ಪಡುತ್ತಿದ್ದೀರಿ. ಆ ಬಗ್ಗೆ ಒಂದು ಸಲ ಅಂದರೆ ಈ ಕೇಸಿನ ಘಟನೆಯಾಗುವ ಸುಮಾರು ಒಂದು ವರ್ಷದ ಹಿಂದೆ ಹಿರಿಯರನ್ನು ಸೇರಿಸಿ ಪಂಚಾಯತಿ ಮಾಡಲಾಗಿತ್ತು. ಸದರಿ ಪಂಚಾಯತಿಯಲ್ಲಿ ಸಾಕ್ಷಿಯವರನ್ನು ಚಾಸಾ-1 ಮತ್ತು ಪ್ರಾಸಾ-4 ನೇಯವರು ಕರೆದುಕೊಂಡು ಹೋಗಿದ್ದರು. ಸದರಿ ಪಂಚನಾಯತಿಯಲ್ಲಿ ಚಾಸಾ-12 ಮಹಮದ ಇಟಗಿ ಸಹ ಭಾಗವಹಿಸಿದ್ದರು. ಸದರಿ ಪಂಚಾಯತಿಯು ಮುನವಳ್ಳಿಯಲ್ಲಿರುವ ಆರೋಪಿಯಾದ ನಿಮ್ಮ ಮನೆಯಲ್ಲಿ ನಡೆದಿದ್ದು, ಆಗ ಜಮಾತಿಯವರು ಸೇರಿ ನಿಮಗೆ ಬುದ್ದಿವಾದ ಹೇಳಿದ್ದರು. ಶಬಾನಾಳ ಜೊತೆ ಪದೆ ಪದೆ ಗಲಾಟೆ ಮಾಡಬೇಡ, ಹಿಂಸೆ ಕೊಡಬೇಡ ಎಂದು ಸಾಕ್ಷಿದಾರರು ಆರೋಪಿಯಾದ ನಿಮಗೆ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.18 ಪ್ರಾಸಾಃ5 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕ 18.08.2022 ರಂದು ಅವರು ಊರಲ್ಲಿದ್ದಾಗ ಮುಂಜಾನೆ ಸುಮಾರು 11.00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಪ್ರಾಸಾ-4 ನೇಯವರು ಅವರ ಮನೆಗೆ

ಬಂದು, ಆರೋಪಿಯಾದ ನೀವು ಶಬಾನಾಳನ್ನು ಚಾಕುವಿನಿಂದ ಇರಿದು ಕೊಂದಿದ್ದೀರಿ ಎಂದು ಹೇಳಿರುತ್ತಾರೆ. ನಂತರ ಅವರ ಜಮಾತಿಯವರಾದ ಚಾಸಾ-14 ಶುಬಾನಿ ದೇಶನೂರ, ಚಾಸಾ-15 ದಾದಾಪೀರ ಹುದಲಿ, ಚಾಸಾ-12 ಮಹಮ್ಮದಶಮೀರ ಇಟಗಿ, ಪ್ರಾಸಾ-1 ಮಹೇಶ ಪಾಟೀಲ, ಸಾಕ್ಷಿಯವರು, ಶಬಾನಾಳ ತಂದೆ-ತಾಯಿ ಮತ್ತು ತಮ್ಮ ಹಾಗೂ ಇನ್ನು ನಾಲ್ಕು ಜನ ಸವದತ್ತಿಯಲ್ಲಿ ಅಯ್ಯಪ್ಪ ನಗರದಲ್ಲಿರುವ ಶಬಾನಾ ವಾಸ ಮಾಡುತ್ತಿದ್ದ ಬಾಡಿಗೆ ಮನೆಗೆ ಹೋದರು, ಆಗ ಸಮಯ ಅಪರಾಹ್ನ ಸುಮಾರು 01.30 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.19 ಪ್ರಾಸಾಃ5 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮನೆಗೆ ಹೋದಾಗ ಮನೆಯ ಬಾಗಿಲು ತೆರೆದಿತ್ತು. ಶಬಾನಾ ರಕ್ತದ ಮಡುವಿನಲ್ಲಿ ಬಿದ್ದಿದ್ದಳು. ಅಲ್ಲಿ ಶಬಾನಾಳ ಮಗಳು ಪ್ರಾಸಾ-2 ಆಲಿಯಾ ಇದ್ದಳು. ಶಬಾನಾಳ ದೇಹ ನೋಡಿದಾಗ ಆಕೆಯ ಕುತ್ತಿಗೆ, ಮುಂಗೈ ಮತ್ತು ಹೊಟ್ಟೆಯ ಮೇಲೆ ಚಾಕುವಿನಿಂದ ಚುಚ್ಚಿದ ಗಾಯ ಇತ್ತು. ಅವರು ಹೋಗಿ ನೋಡಿದಾಗ ಶಬಾನಾ ತೀರಿಕೊಂಡಿದ್ದಳು. ಪ್ರಾಸಾ-2 ನೇಯವಳು ಶವದ ಪಕ್ಕ ಕುಳಿತಿದ್ದಳು. ಅಲ್ಲಿ ಪಕ್ಕದ ಮನೆಯ ಪ್ರಾಸಾ-3 ಶಿವಾನಂದ ಚೊಪಡೆ ಇದ್ದರು. ಪ್ರಾಸಾ-3 ಮತ್ತು ಪ್ರಾಸಾ-2 ನೇಯವರಲ್ಲಿ ಅವರು ಘಟನೆಯ ಬಗ್ಗೆ ಕೇಳಿದಾಗ ಪ್ರಾಸಾ-2 ನೇಯವಳು ಅವರಲ್ಲಿ ತನ್ನ ತಂದೆಯು ತನ್ನ ತಾಯಿಯನ್ನು ಚಾಕುವಿನಿಂದ ಕೊಚ್ಚಿ ಕೊಚ್ಚಿ ಕೊಂದಿರುವುದಾಗಿ ಹೇಳಿರುತ್ತಾಳೆ. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.20 ಪ್ರಾಸಾಃ5 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-1 ನೇಯವರು ಅವರನ್ನು ಪೋಲಿಸ ಠಾಣೆಗೆ ಹೋಗಿ ದೂರು ನೀಡೋಣ ಎಂದು

ಪೋಲಿಸ ಠಾಣೆಗೆ ಕರೆದುಕೊಂಡು ಹೋದರು. ಪೋಲಿಸ ಠಾಣೆಯಲ್ಲಿ ಚಾಸಾ-1 ನೇಯವರು ಹೇಳಿದಂತೆ ಸಾಕ್ಷಿಯವರು ನಿಪಿ-26 ರಂತೆ ಪಿರ್ಯಾದಿಯನ್ನು ಬರೆದಿರುತ್ತಾರೆ. ಅದಕ್ಕೆ ಚಾಸಾ-1 ನೇಯವರು ಅವರ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಪಿ-26 ದಾಖಲೆಗೆ ಸಾಕ್ಷಿಯವರು ದಸ್ತೂರ ಎಂದು ನಿಪಿ-26(ಎ)ರಂತೆ ಸಹಿ ಮಾಡಿದ್ದು, ಸದರಿ ಪಿರ್ಯಾದಿಯನ್ನು ಪೋಲಿಸರಿಗೆ ಬರೆದು ಕೊಡುವಾಗ ಸಮಯ ಅಪರಾಹ್ನ 02.00 ರಿಂದ 02.15 ಗಂಟೆಯಾಗಿತ್ತು. ಮರುದಿನ ಪೋಲಿಸರು ಈ ಕೇಸಗೆ ಸಂಬಂಧಪಟ್ಟಂತೆ ಸಾಕ್ಷಿಯವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ತೆಗೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.21 ಪ್ರಾಸಾಃ6 ಗಿರಿಜವ್ವಾ ಶಿವಾನಂದ ವಾಲಿಕಾರ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-8 ಮಹಾದೇವಿ ಕೌಜಲಗಿ ಶಬಾನಾ ಗೊರವನಕೊಳ್ಳ ಎಂಬುವವಳನ್ನು ಕರೆದುಕೊಂಡು ಬಂದು ಅವರಿಗೆ ಪರಿಚಯ ಮಾಡಿಸಿ, ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ಅವರ ಮನೆಯನ್ನು ಸದರಿ ಶಬಾನಾಳಿಗೆ ಈಗ ಎರಡುವರೆ ವರ್ಷಗಳ ಹಿಂದೆ ಬಾಡಿಗೆಗೆ ನೀಡಿದ್ದರು. ಸದರಿ ಮನೆ ಬಾಡಿಗೆ ತಿಂಗಳಿಗೆ ರೂ.800/- ಇತ್ತು. ಸದರಿ ಮನೆಯಲ್ಲಿ ಶಬಾನಾ ಮತ್ತು ಆಕೆಯ ಮಗಳು ಆಲಿಮಾ ಇರುತ್ತಿದ್ದರು. ತನ್ನ ಮತ್ತು ತನ್ನ ಗಂಡನ ಮಧ್ಯೆ ಜಗಳವಾಗಿದ್ದು, ತನ್ನ ಗಂಡ ತನ್ನ ಜೊತೆ ಇರುವುದಿಲ್ಲ ಮತ್ತು ಈ ಕಾರಣದಿಂದ ತಾನು ಮತ್ತು ತನ್ನ ಮಗಳು ಮನೆಯಲ್ಲಿರುತ್ತೇವೆ ಎಂದು ಶಬಾನಾ ಸಾಕ್ಷಿಯವರಲ್ಲಿ ಹೇಳಿದ್ದಳು. ಶಬಾನಾಳ ಗಂಡ ಮುನವಳ್ಳಿಯಲ್ಲಿ ಇರುವುದಾಗಿ ಶಬಾನಾ ಅವರಲ್ಲಿ ಹೇಳಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.22 ಪ್ರಾಸಾಃ6 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಶಬಾನಾಳಿಗೆ ಮನೆ ಬಾಡಿಗೆಗೆ ಕೊಟ್ಟ 15 ದಿನಗಳ ನಂತರ ಬೆಳಿಗ್ಗೆ ಸುಮಾರು 11.00 ಗಂಟೆ ಸುಮಾರಿಗೆ ಚಾಸಾ-8 ಮಹಾದೇವಿ ಸಾಕ್ಷಿಯವರ ಗಂಡ ಚಾಸಾ-18 ರವರಿಗೆ ಫೋನ್ ಮಾಡಿ, ಶಬಾನಾಳನ್ನು ಆಕೆಯ ಗಂಡ ಬಂದು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ, ಬನ್ನಿ ಎಂದು ಹೇಳಿದಾಗ, ಸಾಕ್ಷಿಯವರು ಮತ್ತು ಅವರ ಗಂಡ ಕೂಡಿಕೊಂಡು ಸದರಿ ಮನೆಗೆ ಹೋಗಿರುತ್ತಾರೆ. ಅಲ್ಲಿ ಮನೆಗೆ ಹೋಗಿ ನೋಡಿದಾಗ ನೆಲದಲ್ಲಿ ರಕ್ತ ಬಿದ್ದಿತ್ತು. ಶಬಾನಾಳ ಕೊರಳು, ಹೊಟ್ಟೆ ಮತ್ತು ಕೈಗೆ ಚುಚ್ಚಿದ ಗಾಯಗಳು ಇದ್ದವು. ಶಬಾನಾಳ ತಲೆ ಮನೆಯ ಬಾಗಿಲ ಕಡೆಗೆ ಇತ್ತು. ಶಬಾನಾಳ ಗಂಡ ಆಕೆಯ ಮೇಲೆ ಸಂಶಯ ಮಾಡಿ ಆಕೆಯನ್ನು ಕೊಲೆ ಮಾಡಿರುವುದಾಗಿ ತಿಳಿಯಿತು. ಆ ದಿನ ಬೆಳಿಗ್ಗೆ 10.30 ಗಂಟೆಗೆ ಶಬಾನಾಳ ಕೊಲೆಯಾಗಿರುವುದಾಗಿ ಚಾಸಾ-8 ಮಹಾದೇವಿ ಸಾಕ್ಷಿಯವರಿಗೆ ಹೇಳಿದಳು. ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ಈ ಮೇಲೆ ಹೇಳಿರುವ ಮನೆ 30 ಅಡಿ ಉದ್ದ ಮತ್ತು 9 ಅಡಿ ಅಗಲ ಇದೆ. ಸದರಿ ಮನೆ ಒಂದು ಕೋಣೆಯ ಮನೆಯಾಗಿದ್ದು, ಅದರ ಮಧ್ಯೆ ಅರ್ಧ ಗೋಡೆಯಷ್ಟು ಎತ್ತರಕ್ಕೆ ವಿಭಾಗ ಮಾಡಿ ಗೋಡೆ ಮಾಡಿದ್ದು, ಅಡುಗೆ ಮನೆಗೆ ಮರೆಯಾಗುವಂತೆ ಮಾಡಲಾಗಿತ್ತು. ಸದರಿ ಮನೆ ಇರುವ ಜಾಗೆ ಸಾಕ್ಷಿಯವರಿಗೆ ಅಕ್ರಮ-ಸಕ್ರಮದಿಂದ ಬಂದಿರುತ್ತದೆ. ಶಬಾನಾಳ ಗಂಡನ ಹೆಸರು ಮೆಹಬೂಬಸಾಬ್. ಪೋಲಿಸರು ಸಾಕ್ಷಿಯವರನ್ನು ಈ ಕೇಸಗೆ ಸಂಬಂಧಪಟ್ಟಂತೆ ಶಬಾನಾಳ ಕೊಲೆಯಾದ ದಿನ ಕರೆಸಿದ್ದರು ಮತ್ತು ಮರುದಿನ ಸಹ ಕರೆಸಿದ್ದರು. ಸಾಕ್ಷಿಯವರು ಪೋಲಿಸರ ಮುಂದೆ ಈ ಕೇಸಗೆ ಸಂಬಂಧಪಟ್ಟಂತೆ ಹೇಳಿಕೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.23 ಪ್ರಾಸಾಃ7 ಬಸವರಾಜ ಎಸ್. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂಬರ 3 ಉಪವಿಭಾಗ, ಭದ್ರಾವತಿ ತಮ್ಮ

ಸಾಕ್ಷ್ಯದಲ್ಲಿ, ಅವರು 2016-2017 ನೇ ಸಾಲಿನಿಂದ ದಿನಾಂಕ 14.07.2023 ರ ತನಕ ಲೋಕೋಪಯೋಗಿ ಇಲಾಖೆ ಸವದತ್ತಿ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಕೇಸಗೆ ಸಂಬಂಧಪಟ್ಟಂತೆ ದಿನಾಂಕ 22.08.2022 ರಂದು ಅವರ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಕೇಸಗೆ ಸಂಬಂಧಪಟ್ಟಂತೆ ಕೊಲೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದ ನಕ್ಷೆ ತಯಾರಿಸುವಂತೆ ಕೋರಿ ತನಿಖಾಧಿಕಾರಿಯವರು ನೀಡಿರುವ ಪತ್ರವನ್ನು ನೀಡಿರುತ್ತಾರೆ. ಅದರಂತೆ ನಾನು ದಿನಾಂಕ 25.08.2022 ರಂದು ಪೋಲಿಸ ಸಿಬ್ಬಂದಿಯವರಾದ ವೆಂಕಟೇಶ ಮೇಟಿ ಇವರ ಜೊತೆ ಕೃತ್ಯ ನಡೆದ ಸ್ಥಳ ಸವದತ್ತಿಯ ಅಯ್ಯಪ್ಪಸ್ವಾಮಿ ನಗರಕ್ಕೆ ಹೋಗಿ ಅಲ್ಲಿ ಈ ಮೇಲೆ ಹೇಳಿರುವ ಪೋಲಿಸರು ಸ್ಥಳ ತೋರಿಸಿದಂತೆ ಸಾಕ್ಷಿಯವರು ಮನೆಯ ನಕ್ಷೆಯನ್ನು ನಿಪಿ-28 ರಂತೆ ತಯಾರಿಸಿ, ನಂತರ ದಿನಾಂಕ 26.08.2022 ರಂದು ತನಿಖಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವರ ಕಚೇರಿಯು ಸ್ವೀಕರಿಸಿದ ತನಿಖಾಧಿಕಾರಿಯವರು ನೀಡಿದ ನಿಪಿ-27 ಪತ್ರವಾಗಿದ್ದು, ಸದರಿ ನಕ್ಷೆಯನ್ನು ತನಿಖಾಧಿಕಾರಿಯವರಿಗೆ ಕಚೇರಿಯ ಮೂಲಕ ಕಳುಹಿಸಿರುವ ನಿಪಿ-29 ಪತ್ರವಾಗಿರುತ್ತದೆ. ಸದರಿ ಪತ್ರಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸಹಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.24 ಪ್ರಾಸಾಃ8 ಗಿರಿಪ್ರಸಾದ್ ವೆಂಕಟೇಶಪ್ರಸಾದ ರೇವಡಿ ರವರು ತಮ್ಮ ಸಾಕ್ಷ್ಯದಲ್ಲಿ, ಸವದತ್ತಿಯಲ್ಲಿ ಲಕ್ಷ್ಮೀ ಪೋಟೊಗ್ರಾಫರ್ ಎನ್ನುವ ಅಂಗಡಿ ಇಟ್ಟುಕೊಂಡು ಸುಮಾರು 20-25 ವರ್ಷಗಳಿಂದ ಪೋಟೊಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದಾರೆ. ದಿನಾಂಕ 18.08.2022 ರಂದು ಅವರನ್ನು ಸವದತ್ತಿ ಪೋಲಿಸರು ಸವದತ್ತಿ ಠಾಣೆಗೆ ಕರೆಸಿ, ಅಯ್ಯಪ್ಪಸ್ವಾಮಿ ನಗರದಲ್ಲಿ ಕೊಲೆಯಾಗಿರುವ ಒಂದು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಒಂದು ಹೆಣ್ಣು ಮಗಳ ಮೃತ ದೇಹ ಇದ್ದು, ಅಲ್ಲಿ ಪೋಟೊಗಳನ್ನು ಅವರ ಕಡೆಯಿಂದ ತೆಗೆಸಿರುತ್ತಾರೆ. ಆ ದಿನ ಅವರು

ಸುಮಾರು ಎಂಟು ಪೋಟೊಗಳನ್ನು ನಿಪಿ-3 ರಿಂದ ನಿಪಿ-6, ನಿಪಿ-8 ರಿಂದ ನಿಪಿ-14 ರಂತೆ ತೆಗೆದಿರುತ್ತಾರೆ. ನಂತರ ಪೋಲಿಸ ಠಾಣೆಗೆ ಬಂದು ಅಲ್ಲಿಯೂ ಸಹ ಪೋಟೊಗಳನ್ನು ನಿಪಿ-16, ನಿಪಿ-17, ನಿಪಿ-19 ರಿಂದ ನಿಪಿ-23 ರಂತೆ ತೆಗೆದಿರುತ್ತಾರೆ. ನಂತರ ದಿನಾಂಕ 19.08.2022 ರಂದು ಪೋಲಿಸ ಠಾಣೆಯಲ್ಲಿ ಕೆಲವು ಪೋಟೊಗಳನ್ನು ನಿಪಿ-30 ಮತ್ತು ನಿಪಿ-31 ರಂತೆ ತೆಗೆದಿರುತ್ತಾರೆ. ಸದರಿ ಪೋಟೊಗಳನ್ನು ಅವರ ವಿವೋ ಮೊಬೈಲನಲ್ಲಿ ತೆಗೆದು, ನಂತರ ಸದರಿ ಪೋಟೊಗಳನ್ನು ಕಂಪ್ಯೂಟರಗೆ ಅಳವಡಿಸಿ, ಅದರ ಸಿಡಿ ನಿಪಿ-32 ರಂತೆ ಮಾಡಿ ಕೊಟ್ಟಿರುತ್ತಾರೆ. ಸದರಿ ಪೋಟೊಗಳನ್ನು ಪ್ರಿಂಟ್ ಮಾಡಿ ಪೋಲಿಸರಿಗೆ ನೀಡಿರುತ್ತಾರೆ. ಈ ಮೇಲೆ ಹೇಳಿದಂತೆ ಅವರು ಪೋಟೊಗಳನ್ನು ತೆಗೆದು, ಅವುಗಳನ್ನು ಕಂಪ್ಯೂಟರಗೆ ಅಳವಡಿಸಿ ಪ್ರಿಂಟ್ ಮಾಡಿ ಕೊಟ್ಟ ಬಗ್ಗೆ ಮತ್ತು ಸಿಡಿ ಮಾಡಿದ ಬಗ್ಗೆ ಅವರು ಪೋಲಿಸರಿಗೆ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ಅಡಿಯಲ್ಲಿ ಪ್ರಮಾಣ ಪತ್ರ ನಿಪಿ-33 ರಂತೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.25 ಪ್ರಾಸಾಃ9 ಸಂಗಮೇಶ ಯಲ್ಲಪ್ಪ ಕುರಿ, ಮುಖ್ಯಪೇದೆ ಎಸ್ ಸಿ 2767, ರಾಮದುರ್ಗ ಪೋಲಿಸ ಠಾಣೆ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 30.08.2022 ರಂದು ಸವದತ್ತಿ ಪೋಲಿಸ ಠಾಣೆಯ ಇನ್ಸಪೆಕ್ಟರ ಆಗಿದ್ದ ಚಾಸಾ-31 ಜೆ ಕರುಣೇಶಗೌಡ ಇವರು ಈ ಕೇಸನಲ್ಲಿ ತನಿಖೆಯ ಕಾಲದಲ್ಲಿ ಸಂಗ್ರಹಿಸಿದ್ದ 14 ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸುವ ಬಗ್ಗೆ ಆರ್‌ಎಫ್‌ಎಸ್‌ಎಲ್ ಹುಬ್ಬಳ್ಳಿ ತೆಗೆದುಕೊಂಡು ಹೋಗಿ ನೀಡುವಂತೆ ಕರ್ತವ್ಯದಲ್ಲಿ ನೇಮಕ ಮಾಡಿದ್ದರು. ಅದರಂತೆ ಸಾಕ್ಷಿಯವರು ಅದೇ ದಿನ 14 ವಸ್ತುಗಳನ್ನು ತೆಗೆದುಕೊಂಡು ಹುಬ್ಬಳ್ಳಿ ಆರ್‌ಎಫ್‌ಎಸ್‌ಎಲ್ ಗೆ ಹೋಗಿ ನೀಡಿರುತ್ತಾರೆ. ಸದರಿ ವಸ್ತುಗಳು ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಸೀಲ್ ಮಾಡಿದ್ದಾಗಿತ್ತು. ನಂತರ ಠಾಣೆಗೆ ವಾಪಸ್ಸಾಗಿ ಆ

ಬಗ್ಗೆ ಸ್ವೀಕೃತಿಯನ್ನು ನಿಪಿ-35 ರಂತೆ ಅವರ ಮೇಲಾಧಿಕಾರಿಗಳಿಗೆ ವರದಿ ನಿಪಿ-34 ಯ ಜೊತೆಯಲ್ಲಿ ನೀಡಿರುತ್ತಾರೆ. ಮುಮಾ-1 ರಿಂದ 9 ಮತ್ತು ಮುಮಾ-11 ರಿಂದ ಮುಮಾ-15 ವಸ್ತುಗಳು ಈ ಮೇಲೆ ಹೇಳಿದಂತೆ ಸಾಕ್ಷಿಯವರು ಆರ್ ಎಫ್ಎಸ್ಎಲ್ ಹುಬ್ಬಳ್ಳಿಗೆ ನೀಡಿರುವ ವಸ್ತುಗಳಾಗಿರುತ್ತವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.26 ಪ್ರಾಸಾಃ10 ಆನಂದ ಸೋಮಪ್ಪಾ ಕಪ್ಪತ್ತಿ ಸಿಪಿಸಿ, ರಾಮದುರ್ಗ ಪೋಲಿಸ ಠಾಣೆ ರವರು ತಮ್ಮ ಸಾಕ್ಷ್ಯದಲ್ಲಿ, ಅವರು ದಿನಾಂಕ 15.05.2019 ರಿಂದ ದಿನಾಂಕ 30.08.2024 ರವರೆಗೆ ಸವದತ್ತಿ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಆಗಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ 18.08.2022 ರಂದು ಈ ಕೇಸಗೆ ಸಂಬಂಧಪಟ್ಟಂತೆ ಆರೋಪಿಯಾದ ನಿಮ್ಮನ್ನು ಪತ್ತೆ ಮಾಡಿ ತಂದು ಹಾಜರು ಪಡಿಸುವಂತೆ ಆರಕ್ಷಕ ನೀರಿಕ್ಷಕರಾಗಿದ್ದ ಚಾಸಾ-31 ಕರುಣೇಶಗೌಡ ಇವರು ಸಾಕ್ಷಿಯವರಿಗೆ ಮತ್ತು ಸಿಪಿಸಿ ನಂಬರ 3446 ಎಮ್. ಪಿ. ತೆರದಾಳ ಇವರಿಗೆ ಜ್ಞಾಪನ ಪತ್ರ ನಿಪಿ-36 ರಂತೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.27 ಪ್ರಾಸಾಃ10 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಜ್ಞಾಪನ ಪತ್ರದಂತೆ ಆರೋಪಿಯನ್ನು ಪತ್ತೆ ಮಾಡುವಂತೆ ಅದೇ ದಿನ ಸಾಯಂಕಾಲ ಸುಮಾರು 06.45 ಗಂಟೆ ಸಮಯದಲ್ಲಿ ಪೋಲಿಸ ಠಾಣೆಯಿಂದ ಹೊರಗಡೆ ಹೋಗುತ್ತಿದ್ದಾಗ, ಪೋಲಿಸ ಠಾಣೆಯ ಮುಂದುಗಡೆ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅನುಮಾನಾಸ್ಪದವಾಗಿ ನಿಂತಿದ್ದು, ಆತನ ಕೈಯಲ್ಲಿ ಚಾಕು ಇತ್ತು. ಸದರಿ ವ್ಯಕ್ತಿಯ ಮೈಮೇಲೆ ಇದ್ದ ಬಟ್ಟೆಗಳಲ್ಲಿ ರಕ್ತದ ಕಲೆಗಳು ಇದ್ದವು. ಆಗ ಸಾಕ್ಷಿಯವರು ಹೋಗಿ

ಸದರಿ ವ್ಯಕ್ತಿಯ ಹೆಸರು ಕೇಳಿದಾಗ ಸದರಿ ವ್ಯಕ್ತಿಯಾದ ನೀವು ಹೆಸರು ಮೆಹಬೂಬಸಾಬ್ ಗರೀಬಸಾಬ್ ಗೊರವನಕೊಳ್ಳ, ಸಾಕೀನ ಮುನವಳ್ಳಿ ಎಂದು ಹೇಳಿರುತ್ತೀರಿ. ನಿಮ್ಮ ಹೆಸರು ತಿಳಿದುಕೊಂಡು ಈ ಕೇಸಗೆ ಸಂಬಂಧಪಟ್ಟ ಆರೋಪಿ ಎಂದು ನಿಶ್ಚಯಿಸಿ ನಿಮ್ಮನ್ನು ಹಿಡಿದು ಪೋಲಿಸ ಠಾಣೆಗೆ ಸಂಜೆ 07.00 ಗಂಟೆ ಸಮಯದಲ್ಲಿ ಚಾಸಾ-31 ರವರ ಮುಂದೆ ಹಾಜರು ಪಡಿಸಿ, ಆ ಬಗ್ಗೆ ಸಾಕ್ಷಿಯವರು ಚಾಸಾ-31 ರವರಿಗೆ ವರದಿ ನಿಪಿ-37 ರಂತೆ ನೀಡಿರುತ್ತಾರೆ. ಸದರಿ ವ್ಯಕ್ತಿಯನ್ನು ಈಗ ಸಾಕ್ಷಿಯವರು ನೋಡಿದರೇ ಗುರುತಿಸಬಲ್ಲರು. ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಾಗಿರುವ ಆರೋಪಿಯಾದ ನಿಮ್ಮನ್ನು ನೋಡಿ ಸದರಿ ವ್ಯಕ್ತಿಯಾಗಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.28 ಪ್ರಾಸಾಃ11 **ಡಾ. ಎಚ್.ವಿ.** ಕವಿತಾ ವಿಶೇಷ ತಜ್ಞರು**,** ಕಲಘಟಗಿ ಸಾರ್ವಜನಿಕ ಆಸ್ಪತ್ರೆ ರವರು ತಮ್ಮ ಸಾಕ್ಷ್ಯದಲ್ಲಿ, ಅವರು 2010 ರಿಂದ ದಿನಾಂಕ 10.07.2025 ರವರೆಗೆ ಸಾರ್ವಜನಿಕ ಆಸ್ಪತ್ರೆ ಸವದತ್ತಿಯಲ್ಲಿ ತಜ್ಞ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ 18.08.2022 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಸವದತ್ತಿ ಪೋಲಿಸ ಠಾಣೆಯಿಂದ ಶಬಾನಾ ಮೆಹಬೂಬಸಾಬ್ ಗೋರನವನಕೊಳ್ಳ ಎನ್ನುವ ಮಹಿಳೆಯ ಶವದ ಮರಣೋತ್ತರ ಪರೀಕ್ಷೆಗಾಗಿ ಡಬ್ಲ್ಯೂ .ಪಿ.ಸಿ. 3550 ಸರಸ್ವತಿ ಹಂಪನ್ನವರ (ಚಾಸಾ-29) ಇವರ ಮೂಲಕ ಕೋರಿಕೆ ಪತ್ರ ಬಂದಿರುತ್ತದೆ. ಸದರಿ ಕೋರಿಕೆ ಪತ್ರದಂತೆ ಅವರ ಆಸ್ಪತ್ರೆಯಲ್ಲಿ ಈ ಮೇಲೆ ಹೇಳಿದ ಮಹಿಳೆಯ ಮರಣೋತ್ತರ ಪರೀಕ್ಷೆಯನ್ನು ರಾತ್ರಿ 09.00 ರಿಂದ 10.45 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.29 ಪ್ರಾಸಾಃ11 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪರೀಕ್ಷೆಯ ಸಂದರ್ಭದಲ್ಲಿ ಸದರಿ ಶವದ ಮೈಮೇಲೆ ಈ ಕೆಳಗೆ ಹೇಳಿದ ಗಾಯಗಳು ಕಂಡುಬಂದಿರುತ್ತವೆಃ

- ಕತ್ತಿನ ಮೇಲ್ಭಾಗ 7 ಇಂಚು ಉದ್ದ ಮತ್ತು 1 ½ ಇಂಚಿನ ಅಗಲದ ಆಳವಾದ ಹರಿದ ಗಾಯ, ಸದರಿ ಗಾಯದಲ್ಲಿ ಅನ್ನನಾಳ, ಶ್ವಾಸನಾಳ, ಮುಖ್ಯವಾದ ರಕ್ತನಾಳಗಳು ತುಂಡಾಗಿದ್ದವು.
- ಹೊಟ್ಟೆಯ ಮೇಲ್ಭಾಗ ಬಲಬದಿಯಲ್ಲಿ ಸುಮಾರು 2 ಇಂಚು ಉದ್ದ ಮತ್ತು 1 ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.
- ಬಲಪಕ್ಕೆಲುಬಿನ ಕೆಳಗಿನ ಭಾಗದಲ್ಲಿ 2 ಇಂಚು ಉದ್ದ ಮತ್ತು ½ ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.
- ಬಲಮುಂಗೈಯ ಬಲಭಾಗದಲ್ಲಿ ಮುಂದಿನ ಭಾಗದಲ್ಲಿ 3 ಇಂಚು ಉದ್ದ ಮತ್ತು 1 ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.
- ಈ ಮೇಲೆ ಹೇಳಿದ ನಾಲ್ಕನೇ ಗಾಯದ ಮೇಲ್ಭಾಗದಲ್ಲಿ 1 ½ ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.
- ಬಲ ಮುಂಗೈಯಲ್ಲಿ 2 ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು.
- ಬಲಮಣಿಕಟ್ಟಿನ ಮೇಲ್ಭಾಗದಲ್ಲಿ 1 ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.
- ಎಡ ಅಂಗೈಯಲ್ಲಿ 1 ½ ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.
- ಎಡಮುಂಗೈಯ ಹೊರಭಾಗದಲ್ಲಿ 2 ½ ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು.
- ಬಲತೊಡೆಯಲ್ಲಿ 2 ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು ಮತ್ತು
- ಬಲಭುಜದಲ್ಲಿ 1 ½ ಇಂಚು ಉದ್ದ ಮತ್ತು 2 ಸೆಂಟಿಮೀಟರ ಅಗಲದ ಹರಿದ ಗಾಯ ಇತ್ತು.

ತಲೆಬುರುಡೆ ಮತ್ತು ಮಿದುಳು ಸುಸ್ಥಿತಿಯಲ್ಲಿದ್ದವು. ಪಕ್ಕೆಲುಬಿನ ಗೋಡೆಯಲ್ಲಿ ಈ ಮೇಲೆ ಹೇಳಿದ ಮೂರನೇ ಗಾಯ ಕಂಡುಬಂದಿರುತ್ತದೆ. ಶ್ವಾಸನಾಳ

ತುಂಡಾಗಿತ್ತು. ಬಲಶ್ವಾಸಕೋಶದಲ್ಲಿ ಗಾಯ ಕಂಡುಬಂದಿರುತ್ತದೆ. ಹೃದಯ ಭಾಗ ಸುಸ್ಥಿತಿಯಲ್ಲಿತ್ತು. ಅಪಧಮನಿ ಮತ್ತು ಅಭಿಧಮನಿ ನಾಳಗಳು ತುಂಡಾಗಿದ್ದವು. ಈ ಮೇಲೆ ಹೇಳಿರುವ ಎರಡನೇ ಗಾಯ ಹೊಟ್ಟೆಯ ಒಳಭಾಗದಲ್ಲಿ ಕಂಡುಬಂದಿರುತ್ತದೆ. ಈ ಮೇಲೆ ಹೇಳಿದ ನಾಲ್ಕನೇ ಗಾಯಕ್ಕೆ ಅನುಗುಣವಾಗಿ ಹೊಟ್ಟೆಯ ಮೇಲ್ಭಾಗದಲ್ಲಿ ಗಾಯ ಇತ್ತು. ಅನ್ನನಾಳ ತುಂಡಾಗಿತ್ತು. ಜಠರ ಸುಸ್ಥಿತಿಯಲ್ಲಿತ್ತು. ದೊಡ್ಡಕರುಳಿಗೆ ಗಾಯವಾಗಿತ್ತು. ಕಿಡ್ನಿ ಮತ್ತು ಬ್ಲಾಡರ ಸುಸ್ಥಿತಿಯಲ್ಲಿತ್ತು. ಗುಲ್ಮ ಮತ್ತು ಪಿತ್ತಕೋಶ ಸುಸ್ಥಿತಿಯಲ್ಲಿದ್ದವು. ದೇಹದ ಮೇಲೆ ಕಂಡುಬಂದಿದ್ದ ಗಾಯಗಳು ಮರಣಪೂರ್ವದ ಗಾಯಗಳಾಗಿದ್ದವು. ಮೃತಳ ಸಾವು ಸಾಕ್ಷಿಯವರು ಪರೀಕ್ಷೆ ಮಾಡಿರುವುದಕ್ಕಿಂತ ಹಿಂದೆ ಸುಮಾರು 12-24 ಗಂಟೆಗಳ ಒಳಗೆ ಆಗಿರುವ ಸಾಧ್ಯತೆ ಇತ್ತು. ದೇಹದ ಎಲ್ಲಾ ಭಾಗಗಳು ಶೆಟೆದುಕೊಂಡಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.30 ಪ್ರಾಸಾಃ11 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ಅಭಿಪ್ರಾಯದಲ್ಲಿ ಮೃತಳ ಸಾವು ಆಕೆಯ ಮುಖ್ಯ ಅಂಗಗಳಿಗೆ ಆಗಿದ್ದ ಈ ಮೇಲೆ ಹೇಳಿರುವ ಗಾಯಗಳ ದೆಸೆಯಿಂದ ಆಘಾತ ಮತ್ತು ರಕ್ತಸ್ರಾವದಿಂದ ಆಗಿರುವ ಸಾಧ್ಯತೆ ಇರುತ್ತದೆ. ಶವವನ್ನು ಪರೀಕ್ಷೆ ಮಾಡಿದ ಬಗ್ಗೆ ಅವರು ಮರಣೋತ್ತರ ಶವ ಪರೀಕ್ಷಾ ವರದಿಯನ್ನು ನಿಪಿ-39 ರಂತೆ ನೀಡಿರುತ್ತಾರೆ. ಶವದ ಮೇಲ್ಭಾಗದಲ್ಲಿ ರಕ್ತವಾಗಿದ್ದ ಬಿಳಿ ದುಪ್ಪಟ್ಟಾ, ತಿಳಿಗುಲಾಬಿ ಬಣ್ಣದ ಬ್ರಾ, ನೇರಳೆ ಬಣ್ಣದ ಹೂವಿನ ಡಿಜೈನ ಇದ್ದ ಪ್ರಿಂಟೆಡ್ ನೈಟಿ, ನೀಲಿ ಬಣ್ಣದ ಪೆಟಿಕೋಟ್, ಕಂದುಬಣ್ಣದ ಅಂಡರವೆರ್ ಇದ್ದವು. ಸದರಿ ಬಟ್ಟೆಗಳನ್ನು ಸಂಗ್ರಹಿಸಿ ಪ್ಯಾಕ್ ಮಾಡಿ ಸೀಲ್ ಮಾಡಿ ಈ ಮೇಲೆ ಹೇಳಿರುವ ಮಹಿಳಾ ಸಿಬ್ಬಂದಿಯವರ ಮೂಲಕ ತನಿಖಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಮೃತಳ ರಕ್ತದ ಗುಂಪನ್ನು ಪರೀಕ್ಷಿಸಿ ಈ ಬಗ್ಗೆ ತನಿಖಾಧಿಕಾರಿಯವರಿಗೆ ವರದಿ ನಿಪಿ-40 ರಂತೆ ಮಾಡಿರುತ್ತಾರೆ. ಮೃತಳ ರಕ್ತದ ಗುಂಪು AB+ ಆಗಿತ್ತು. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಮೃತಳ

ವಾರಸುದಾರರಿಗೆ ನೀಡುವ ಬಗ್ಗೆ ಪೋಲಿಸ ಸಿಬ್ಬಂದಿಯವರ ವಶಕ್ಕೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.31 ಪ್ರಾಸಾಃ11 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕ 20.03.2023 ರಂದು ಈ ಕೇಸಗೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರು ಪೋಲಿಸ ಸಿಬ್ಬಂದಿ ಎಚ್ ಸಿ 2775 ಇವರ ಮೂಲಕ ಒಂದು ಚಾಕುವನ್ನು ಕಳುಹಿಸಿಕೊಟ್ಟು ಅದನ್ನು ಪರಿಶೀಲನೆ ಮಾಡಿ ಅಭಿಪ್ರಾಯ ನೀಡುವಂತೆ ಕೋರಿದ್ದರು. ಸದರಿ ಚಾಕುವನ್ನು ಸಾಕ್ಷಿಯವರು ಪರೀಕ್ಷೆ ಮಾಡಿದ್ದು, ಅದರ ಉದ್ದ 1 ಅಡಿ 2 ಸೆಂಟಿಮೀಟರ ಇತ್ತು. ಅದರ ಹಿಡಿಕೆ 5 ಇಂಚು ಉದ್ದ ಇತ್ತು. ಹಿಡಿಕೆಯ ಭಾಗದಲ್ಲಿ ಚಾಕುವಿನ ಅಗಲ 3 ಇಂಚು ಇತ್ತು ಮತ್ತು ತುದಿಯ ಭಾಗದಲ್ಲಿ 1 ½ ಸೆಂಟಿ ಮೀಟರ ಅಗಲ ಇತ್ತು. ಸದರಿ ಚಾಕುವಿನ ಮೇಲೆ ರಕ್ತದ ಕಲೆಗಳು ಇದ್ದವು. ಮರಣೋತ್ತರ ಶವ ಪರೀಕ್ಷಾ ವರದಿಯಲ್ಲಿ ಹೇಳಿರುವ ಗಾಯಗಳು ಈ ಮೇಲೆ ಹೇಳಿರುವ ಚಾಕುವಿನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆಗಳು ಇವೆ ಎಂದು ಸಾಕ್ಷಿಯವರು ಲಿಖಿತವಾಗಿ ಅಭಿಪ್ರಾಯ ನಿಪಿ-42 ರಂತೆ ನೀಡಿರುತ್ತಾರೆ. ಈಗ ತೋರಿಸಿದ ದಾಖಲೆಯು ಚಾಕುವನ್ನು ಪರೀಕ್ಷೆ ಮಾಡಿ ವರದಿ ನೀಡುವಂತೆ ತನಿಖಾಧಿಕಾರಿಯವರು ನೀಡಿರುವ ನಿಪಿ-41 ರಂತೆ ಕೋರಿಕೆ ಪತ್ರವಾಗಿದ್ದು, ಸದರಿ ಚಾಕುವನ್ನು ಈಗ ಸಾಕ್ಷಿಯವರು ನೋಡಿದರೆ ಗುರುತಿಸಬಲ್ಲರು ಮತ್ತು ಮುಮಾ-7 ವಸ್ತು ಸದರಿ ಚಾಕು ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.32 ಪ್ರಾಸಾಃ12 ಕರುಣೇಶಗೌಡ, ಪೋಲಿಸ ಇನ್ಸಪೆಕ್ಟರ, ಕರ್ನಾಟಕ ಲೋಕಾಯುಕ್ತ, ಧಾರವಾಡ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.08.2022 ರಂದು ಮಧ್ಯಾಹ್ನ

02.30 ಗಂಟೆಗೆ ಅವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನಿಪಿ-26 ರಂತೆ ಕೊಟ್ಟಂತಹ ಒಂದು ದೂರನ್ನು ಅವರು ಸ್ವೀಕರಿಸಿ, ಅದರ ಆಧಾರದ ಮೇಲೆ ಅವರ ಠಾಣಾ ಮೊಕದ್ದಮೆ ನಂಬರ 216/2022 ರಲ್ಲಿ ಒಂದು ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನಿಪಿ-44 ರಂತೆ ನ್ಯಾಯಾಲಯಕ್ಕೆ ಮತ್ತು ಅವರ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ಚಾಸಾ-2, ಚಾಸಾ-3 ಮತ್ತು ಚಾಸಾ-16 ಇವರನ್ನು ಪಂಚರಾಗಿ ಹಾಜರು ಪಡಿಸಿಕೊಂಡು ಅವರಿಗೆ ನೋಟಿಸ್ಸನ್ನು ಕೊಟ್ಟರು. ಆ ಬಳಿಕ ಸವದತ್ತಿಯ ಅಯ್ಯಪ್ಪಸ್ವಾಮಿ ನಗರದ ರಾಮಾಪುರ ಸೈಟನಲ್ಲಿದ್ದ ಮೃತಳ ಮನೆಗೆ ಭೇಟಿ ಕೊಟ್ಟು ಅಲ್ಲಿದ್ದಂತಹ ಮೃತ ಶ್ರೀಮತಿ ಶಬಾನಾ ಇವಳ ಶವದ ಮೇಲೆ ಶವ ಪಂಚನಾಮೆ ಕ್ರಮವನ್ನು ನಿಪಿ-2 ರಂತೆ ಮಧ್ಯಾಹ್ನ 03.45 ರಿಂದ 04.45 ರ ಅವಧಿಯಲ್ಲಿ ಮಾಡಿರುತ್ತಾರೆ. ಆ ಪಂಚನಾಮೆಯ ಕಾಲದಲ್ಲಿ ನಿಪಿ-3 ರಿಂದ ನಿಪಿ-6 ರಂತೆ ಪೋಟೊಗಳನ್ನು ತೆಗೆಸಲಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.33 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಬಳಿಕ ಶವವನ್ನು ಚಾಸಾ-29 ರವರ ಮೂಲಕ ಮರಣೋತ್ತರ ಪರೀಕ್ಷೆಗಾಗಿ ಸವದತ್ತಿಯ ಸರ್ಕಾರಿ ಆಸ್ಪತ್ರೆಯ ವೈದ್ಯರಿಗೆ ಒಂದು ಕೋರಿಕೆ ಪತ್ರದ ಮೂಲಕ ಹಸ್ತಾಂತರಿಸಿದರು. ಅದೇ ದಿನ ಚಾಸಾ-2 ಮತ್ತು ಚಾಸಾ-3 ಇವರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ನಿಪಿ-7 ರಂತೆ ಸಂಜೆ 05.45 ರಿಂದ 06.45 ರ ಅವಧಿಯಲ್ಲಿ ಮಾಡಿರುತ್ತಾರೆ. ಆ ಪಂಚನಾಮೆಯ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆಯನ್ನು ನಾನು ತಯಾರಿಸಿದ್ದು, ಅದನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಆ ಪಂಚನಾಮೆಯ ಕಾಲಕ್ಕೆ ನಿಪಿ-8 ರಿಂದ ನಿಪಿ-14 ಪೋಟೊಗಳನ್ನು ತೆಗೆಸಲಾಗಿತ್ತು. ಆ ಪಂಚನಾಮೆಯ ಕಾಲಕ್ಕೆ ಮುಮಾ-1 ರಿಂದ

ಮುಮಾ-6 ವಸ್ತುಗಳನ್ನು ಅಮಾನತು ಪಡಿಸಿಕೊಂಡರು. ಆ ಬಳಿಕ ಆರೋಪಿಯ ಪತ್ತೆಗಾಗಿ ಚಾಸಾ-28 ಮತ್ತು ಇನ್ನೋರ್ವ ಸಿಬ್ಬಂದಿ ಎಮ್ ಪಿ ತೆರದಾಳ ಇವರನ್ನು ನೇಮಿಸಿ, ನಿಪಿ-36 ರಂತೆ ಒಂದು ಜ್ಞಾಪನಾ ಪತ್ರವನ್ನು ನೀಡಿರುತ್ತಾರೆ. ಅದೇ ದಿನ ಸಂಜೆ 07.00 ಗಂಟೆಗೆ ಅವರ ಸಿಬ್ಬಂದಿಗಳು ಆರೋಪಿಯಾದ ನಿಮ್ಮನ್ನು ಸಾಕ್ಷಿಯವರ ಮುಂದೆ ಹಾಜರು ಪಡಿಸಿ, ನಿಪಿ-37 ರಂತೆ ಒಂದು ವರದಿಯನ್ನು ಕೊಟ್ಟಿರುತ್ತಾರೆ. ಆರೋಪಿಯಾದ ನೀವು ಕೃತ್ಯ ಮಾಡಿರುವುದನ್ನು ಒಪ್ಪಿಕೊಂಡಿದ್ದು, ನಿಮ್ಮನ್ನು ದಸ್ತಗೀರ ಕ್ರಮ ಅನುಸರಿಸಿ, ಸಾಕ್ಷಿಯವರು ಅವರ ವಶಕ್ಕೆ ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.34 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಬಳಿಕ ಸಾಕ್ಷಿಯವರು ಆರೋಪಿಯಾದ ನಿಮ್ಮ ಸ್ವಖುಷಿ ಹೇಳಿಕೆಯನ್ನು ದಾಖಲು ಮಾಡಿದರು. ಆ ಹೇಳಿಕೆಯಲ್ಲಿ ಆರೋಪಿಯಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ಚಾಕುವನ್ನು ಮತ್ತು ಘಟನೆಯ ಕಾಲಕ್ಕೆ ನೀವು ಧರಿಸಿದ ಬಟ್ಟೆಗಳನ್ನು ಮತ್ತು ನಿಮ್ಮ ಮೊಬೈಲನ್ನು ತೋರಿಸಿ ಹಾಜರು ಪಡಿಸುತ್ತೀರಿ ಎಂದು ಹೇಳಿಕೆ ಕೊಟ್ಟಿರುತ್ತೀರಿ. ಆರೋಪಿಯಾದ ನೀವು ಕೊಟ್ಟಂತಹ ಸ್ವಖುಷಿ ಹೇಳಿಕೆಯನ್ನು ನಿಪಿ-45 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-45(ಎ) ಮತ್ತು ಆರೋಪಿಯ ಸಹಿಯನ್ನು ನಿಪಿ-45(ಬಿ) ಎಂದು ಗುರುತಿಸಲಾಯಿತು. ಆ ಬಳಿಕ ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಹಾಜರು ಪಡಿಸಿಕೊಂಡು, ಆರೋಪಿಯಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಒಂದು ಕಬ್ಬಿಣದ ಚಾಕುವನ್ನು ಹಾಜರು ಪಡಿಸಿದ್ದೀರಿ. ಆ ಚಾಕುವನ್ನು ಸಾಕ್ಷಿಯವರು ನಿಪಿ-15 ಪಂಚನಾಮೆಯ ಮೂಲಕ ಅಮಾನತು ಪಡಿಸಿಕೊಂಡರು. ನಿಪಿ-15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಆ ಪಂಚನಾಮೆಯ ಕಾಲಕ್ಕೆ ನಿಪಿ-16 ಮತ್ತು ನಿಪಿ-17 ರಂತೆ ಫೋಟೊಗಳನ್ನು ತೆಗೆಯಲಾಗಿತ್ತು. ಆ ಚಾಕುವನ್ನು

ಸಾಕ್ಷಿಯವರು ಗುರುತಿಸುತ್ತಿದ್ದು, ಅದನ್ನು ಮುಮಾ-7 ಎಂದು ಈಗಾಗಲೇ ಗುರುತಿಸಲಾಗಿದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.35 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬಳಿಕ ಆರೋಪಿಯಾದ ನೀವು ಕೃತ್ಯ ನಡೆದ ಕಾಲಕ್ಕೆ ಧರಿಸಿದ ಶರ್ಟ, ಪ್ಯಾಂಟ್ ಮತ್ತು ತನ್ನ ಬಳಿ ಇದ್ದ ಮೊಬೈಲ್ ಪೋನನ್ನು ಹಾಜರು ಪಡಿಸಿದ್ದೀರಿ. ಅವುಗಳನ್ನು ಸಾಕ್ಷಿಯವರು ಚಾಸಾ-2 ಮತ್ತು ಚಾಸಾ-3 ಇವರ ಸಮಕ್ಷಮ ನಿಪಿ-18 ಪಂಚನಾಮೆಯ ಮೂಲಕ ಅಮಾನತು ಪಡಿಸಿಕೊಂಡರು. ನಿಪಿ-18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ಆ ಪಂಚನಾಮೆಯ ಕಾಲಕ್ಕೆ ನಿಪಿ-19 ರಿಂದ ನಿಪಿ-23 ಪೋಟೊಗಳನ್ನು ತೆಗೆಸಲಾಗಿತ್ತು. ಅಮಾನತು ಪಡಿಸಿಕೊಂಡಂತಹ ಬಟ್ಟೆಗಳನ್ನು ಮತ್ತು ಮೊಬೈಲ್ ಪೋನನ್ನು ಗುರುತಿಸುತ್ತಿದ್ದು, ಅವುಗಳನ್ನು ಈಗಾಗಲೇ ಮುಮಾ-8 ರಿಂದ ಮುಮಾ-10 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ-4 ರಿಂದ ಚಾಸಾ-6 ಇವರ ಹೇಳಿಕೆಗಳನ್ನು ಪಡೆದುಕೊಂಡರು. ಆ ಬಳಿಕ ಚಾಸಾ-27 ರವರು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಒಂದು ವರದಿಯನ್ನು ನಿಪಿ-46 ರಂತೆ ಕೊಟ್ಟಿದ್ದು, ಅದನ್ನು ಸ್ವೀಕರಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.36 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಬಳಿಕ ಅಮಾನತು ಪಡಿಸಿಕೊಂಡ ವಸ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡರು. ದಿನಾಂಕ 19.08.2022 ರಂದು ಚಾಸಾ-29 ರವರು ಶವವನ್ನು ವಾರಸುದಾರರಿಗೆ ಕೊಟ್ಟ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದರು. ಆ

ಬಳಿಕ ಚಾಸಾ-29 ರವರು ಹಾಜರು ಪಡಿಸಿದ ಮೃತಳ ಶವದ ಮೇಲಿನ ಬಟ್ಟೆಗಳನ್ನು ಚಾಸಾ-2 ಮತ್ತು ಚಾಸಾ-3 ಇವರ ಸಮಕ್ಷಮ ನಿಪಿ-24 ಪಂಚನಾಮೆಯ ಮೂಲಕ ಅಮಾನತು ಪಡಿಸಿಕೊಂಡರು. ನಿಪಿ-24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಆ ಪಂಚನಾಮೆಯ ಕಾಲಕ್ಕೆ ನಿಪಿ-30 ಮತ್ತು ನಿಪಿ-31 ರಂತೆ ಫೋಟೊಗಳನ್ನು ತೆಗೆಸಲಾಗಿತ್ತು. ಅಮಾನತು ಪಡಿಸಿಕೊಂಡ ಐದು ಬಟ್ಟೆಗಳನ್ನು ಈಗಾಗಲೇ ಮುಮಾ-11 ರಿಂದ ಮುಮಾ-15 ಎಂದು ಗುರುತಿಸಲಾಗಿದೆ. ಬಳಿಕ ಆರೋಪಿಯಾದ ನಿಮ್ಮನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದರು. ಬಳಿಕ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡರು. ಬಳಿಕ ಚಾಸಾ-2 ಮತ್ತು ಚಾಸಾ-7 ರಿಂದ ಚಾಸಾ-23 ರವರ ಹೇಳಿಕೆಗಳನ್ನು ಪಡೆದುಕೊಂಡರು. ಆ ಬಳಿಕ ಚಾಸಾ-4 ರಿಂದ ಚಾಸಾ-6 ಇವರ ಹೇಳಿಕೆಗಳನ್ನು ದಾಖಲಿಸಲು ಸವದತ್ತಿ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟರು. ಆ ಬಳಿಕ ಚಾಸಾ-26 ರವರಿಂದ ನಿಪಿ-33 ರಂತೆ ಒಂದು ಪ್ರಮಾಣ ಪತ್ರವನ್ನು ಮತ್ತು ಫೋಟೊಗಳಿಗೆ ಸಂಬಂಧಪಟ್ಟಂತೆ ನಿಪಿ-32 ರಂತೆ ಒಂದು ಸಿಡಿಯನ್ನು ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.37 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.08.2022 ರಂದು ಮೃತ ಶಬಾನಾಳ ಮರಣೋತ್ತರ ಪರೀಕ್ಷಾ ವರದಿಯನ್ನು ಕೊಡುವಂತೆ ಸವದತ್ತಿ ಆಸ್ಪತ್ರೆಗೆ ಕೋರಿಕೆ ಪತ್ರವನ್ನು ಕೊಟ್ಟರು. ಅದೇ ರೀತಿ ಘಟನಾ ಸ್ಥಳದ ನಕಾಶೆಯನ್ನು ಪೂರೈಸುವಂತೆ ಲೋಕೋಪಯೋಗಿ ಇಲಾಖೆಯ ಅಭಿಯಂತರರಿಗೆ ಕೋರಿಕೆ ಪತ್ರವನ್ನು ಕೊಟ್ಟರು. ಘಟನಾ ಸ್ಥಳದ ಉತಾರವನ್ನು ಒದಗಿಸುವಂತೆ ಸವದತ್ತಿ ತಹಶೀಲ್ದಾರರಿಗೆ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟರು. ಆ ಕೋರಿಕೆ ಪತ್ರವನ್ನು ನಿಪಿ-47 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ

ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಮನೆಗೆ ವಿದ್ಯುತ್ ಪೂರೈಕೆ ಇರುವ ಬಗ್ಗೆ ಮಾಹಿತಿ ನೀಡಲು ಶಾಖಾಧಿಕಾರಿಗಳು, ಹೆಸ್ಕಾಂ ಸವದತ್ತಿರವರಿಗೆ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟರು. ದಿನಾಂಕ 22.08.2022 ರಂದು ಮೃತಳ ರಕ್ತದ ಗುಂಪಿನ ವರದಿಯನ್ನು ಸವದತ್ತಿ ಆಸ್ಪತ್ರೆಯಿಂದ ನಿಪಿ-40 ರಂತೆ ಸ್ವೀಕರಿಸಿದರು. ಆ ಬಳಿಕ ಘಟನಾ ಸ್ಥಳದ ಉತಾರವನ್ನು ತಹಶೀಲ್ದಾರ ಸವದತ್ತಿ ಇವರಿಂದ ಪಡೆದುಕೊಂಡು, ಆ ಉತಾರಗಳನ್ನು ನಿಪಿ-48 ಮತ್ತು ನಿಪಿ-49 ಎಂದು ಗುರುತಿಸಲಾಯಿತು. ನಂತರ 23.08.2022 ರಂದು ಚಾಸಾ-4 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಸವದತ್ತಿ ನ್ಯಾಯಾಲಯದಲ್ಲಿ ದಾಖಲು ಮಾಡಿರುವುದು ಅವುಗಳನ್ನು ಸಾಕ್ಷಿಯವರು ಸ್ವೀಕರಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.38 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.08.2022 ರಂದು ಚಾಸಾ-24 ರವರಿಂದ ಘಟನಾ ಸ್ಥಳದ ನಕಾಶೆಯನ್ನು ನಿಪಿ-28 ಮತ್ತು ನಿಪಿ-29 ರಂತೆ ಪಡೆದುಕೊಂಡರು. ದಿನಾಂಕ 25.08.2022 ರಂದು ಮೃತಳ ಪಿ ಎಮ್ ವರದಿಯನ್ನು ನಿಪಿ-39 ರಂತೆ ಸ್ವೀಕರಿಸಿದರು. ದಿನಾಂಕ 30.08.2022 ರಂದು ಜಪ್ತಾದ ಒಟ್ಟು 14 ಮುದ್ದೆಮಾಲುಗಳನ್ನು ಚಾಸಾ-30 ರವರ ಮೂಲಕ ಆರ್ ಎಫ್ ಎಸ್ ಎಲ್ ಹುಬ್ಬಳ್ಳಿ ಇವರಿಗೆ ಕಳುಹಿಸಿಕೊಟ್ಟರು. ಈ ಬಗ್ಗೆ ಚಾಸಾ-30 ರವರು ಒಂದು ವರದಿಯನ್ನು ನಿಪಿ-34 ರಂತೆ ಮತ್ತು ಸ್ವೀಕೃತಿಯನ್ನು ನಿಪಿ-35 ರಂತೆ ನೀಡಿದ್ದು, ಅವುಗಳನ್ನು ಸ್ವೀಕರಿಸಿದರು. ನಂತರ ಘಟನಾ ಸ್ಥಳದ ಮನೆಗೆ ವಿದ್ಯುತ್ ಪೂರೈಕೆ ಇಲ್ಲದೇ ಇರುವ ಬಗ್ಗೆ ಸವದತ್ತಿ ಹೆಸ್ಕಾಂನ ಶಾಖಾಧಿಕಾರಿಗಳು ಕೊಟ್ಟಂತಹ ವರದಿಯನ್ನು ನಿಪಿ-50 ರಂತೆ ಸ್ವೀಕರಿಸಿದರು. ನಂತರ 01.09.2022 ರಂದು ಮೃತ ಶಬಾನಾ ಅವರು ಸವದತ್ತಿ ನ್ಯಾಯಾಲಯದಲ್ಲಿ ದಾಖಲು ಮಾಡಿರುವ ಓ ಎಸ್ ನಂಬರ 299/2022 ರ ಬಗ್ಗೆ

ದಾಖಲಾತಿಗಳನ್ನು ಒದಗಿಸಲು ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಕಳುಹಿಸಿದೆನು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆ.39 ಪ್ರಾಸಾಃ12 ರವರು ಪುನಃ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 10.09.2022 ರಂದು ಸದರಿ ದಾವೆಯ ಆರ್ಡರ ಶೀಟನ್ನು ನ್ಯಾಯಾಲಯದಿಂದ ಸ್ವೀಕರಿಸಿದರು. ಆ ಆರ್ಡರಶೀಟನ ದೃಢಿಕೃತ ನಕಲನ್ನು ನಿಪಿ-51 ಎಂದು ಗುರುತಿಸಲಾಯಿತು. ಅದೇ ದಿನ ತನಿಖೆಯನ್ನು ಪೂರೈಸಿ ಆರೋಪಿಯಾದ ನಿಮ್ಮ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ನ್ಯಾಯಾಲಯದ ಮುಂದೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿದರು. ಆರೋಪಿಯಾದ ನಿಮ್ಮನ್ನು ಗುರುತಿಸಿರುತ್ತಾರೆ. ಆ ಬಳಿಕ ದಿನಾಂಕ 23.03.2023 ರಂದು ಮುದ್ದೆಮಾಲು ಮತ್ತು ಆರ್ ಎಫ್ ಎಸ್ ಎಲ್ ವರದಿಯನ್ನು ಆರ್ ಎಫ್ ಎಸ್ ಎಲ್ ಹುಬ್ಬಳ್ಳಿ ಇವರಿಂದ ನಿಪಿ-43 ರಂತೆ ಸ್ವೀಕರಿಸಿರುತ್ತಾರೆ. ಆ ಬಳಿಕ ಮುಮಾ-7 ಚಾಕುವನ್ನು ಪಿ ಎಮ್ ಮಾಡಿದ ವೈದ್ಯಾಧಿಕಾರಿಯವರಿಗೆ ನಿಪಿ-41 ಪತ್ರದ ಮೂಲಕ ಕಳುಹಿಸಿ, ಅವರಿಂದ ನಿಪಿ-42 ರಂತೆ ಒಂದು ಅಭಿಪ್ರಾಯ ಪತ್ರವನ್ನು ಪಡೆದುಕೊಂಡರು. ದಿನಾಂಕ 29.03.2023 ರಂದು ಈ ಎಲ್ಲಾ ದಾಖಲಾತಿಗಳನ್ನು ಸಾಕ್ಷಿಯವರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

ಪ್ರಶ್ನೆಃ 40 ನಿಮಗೆ ಬೇರೆ ಇನ್ನೇನಾದರು ಹೇಳುವುದು ಇದೆಯಾ?

ಉತ್ತರಃ ನನ್ನ ಹೆಂಡತಿಗೆ ಅನೈತಿಕ ಸಂಬಂಧ ಇತ್ತು. ನಾನು ಈ ಕೊಲೆ ಮಾಡಿಲ್ಲ. ನಾನು ಪ್ರತ್ಯೇಕವಾಗಿ ಹೇಳಿಕೆಯನ್ನು ಸಲ್ಲಿಸುತ್ತೇನೆ.

ಪ್ರಶ್ನೆಃ 41 ನಿಮ್ಮ ಪರವಾಗಿ ಯಾರನ್ನಾದರೂ ಸಾಕ್ಷಿ ಮಾಡಿಸುತ್ತೀರಾ?

ಉತ್ತರಃ ಇದೆ

**(**ಮೇಲೆ ಹೇಳಲಾದ ಪ್ರಶ್ನೆಗಳು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ತಿಳಿದುಕೊಂಡ ನಂತರ ನೀಡಿದ ಸರಿಯಾದ ಉತ್ತರವನ್ನು ದಾಖಲಿಸಲಾಗಿದೆ ಎಂದು ದೃಢೀಕರಿಸಲಾಗಿದೆ**)**

**Sd/-**
**(**ಮಂಜುನಾಥ ನಾಯಕ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ**.**

ದಿನಾಂಕಃ 13.01.2026